ಸಂಪುಟ 01 । ಸಂಚಿಕೆ 181 । ಮಂಗಳವಾರ 26 ಮೇ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
# NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ರಾಷ್ಟ್ರೀಯ ಕಾಗದದ ವಿಮಾನ ದಿನ**

ರಾಷ್ಟ್ರೀಯ ಕಾಗದದ ವಿಮಾನ ದಿನವು ಅನಧಿಕೃತ ಆಚ-ರಣೆಯಾಗಿದ್ದು, ಪ್ರತಿ ವರ್ಷ ಮೇ 26 ರಂದು ಯುನೈಟೆಡ್ ಸ್ಟೇಟ್ಸ್‌ನಲ್ಲಿ ಸರಳವಾದ ವಾಯುಯಾನ ಆಟಿಕೆಯ ನೆನಪಿಗಾಗಿ ಆಚರಿಸಲಾಗುತ್ತದೆ. ಕಾಗದದ ವಿಮಾನ ದಿನದ ಆಚರಣೆಗಳು ಸಾಮಾನ್ಯವಾಗಿ ಸಾಮಾಜಿಕ ಕೂಟಗಳನ್ನು ಒಳಗೊಂಡಿರುತ್ತವೆ, ಅಲ್ಲಿ ಭಾಗವಹಿಸುವವರು ಕಾಗದದ ವಿಮಾನಗಳನ್ನು ರಚಿಸುತ್ತಾರೆ ಮತ್ತು ಹಾರಿಸುತ್ತಾರೆ.

## ಸುಭಾಷಿತ

ಯಾವ ಕೆಲಸವನ್ನೇ ಆಗಲಿ
ಉತ್ಸಾಹದಿಂದ ಮಾಡಬಲ್ಲವನು ತನ್ನ
ಗುರಿ ಮುಟ್ಟದೆ ಇರಲಾರ.

–ಮಹರ್ಷಿ ವಾಲ್ಮೀಕಿ

## ಪೆಟ್ರೋಲ್-ಡಿಸೇಲ್ ಬೆಲೆ ನಿರಂತರ ಏರಿಕೆ

# ಕೇಂದ್ರ ಸರ್ಕಾರದ ವಿರುದ್ಧ ಸಿಎಂ–ಡಿಸಿಎಂ ವಾಗ್ದಾಳಿ

**ಬೆಂಗಳೂರು: ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದು, ಇದೇ ಈ ತಿಂಗಳ ಅಂತ್ಯದಲ್ಲಿ ಪ್ರತಿಭಟನೆ ನಡೆಸುವುದಾಗಿ ಘೋಷಿಸಿದ್ದಾರೆ.**

ಕೆಪಿಸಿಸಿ ಕಚೇರಿಯಲ್ಲಿಂದು ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯ ಮಂತ್ರಿ ಸಿದ್ದರಾಮಯ್ಯ, ಮೋದಿ ಅವರು ಅಧಿಕಾರಕ್ಕೆ ಬಂದರೆ ಅಚ್ಛೇದಿನ್ ಬರುತ್ತದೆ ಎಂದು ಹೇಳಿ ದೇಶದ ಜನರಿಗೆ ಟೋಪಿ ಹಾಕುವ ಕೆಲಸ ಮಾಡಲಾಗಿದೆ. ಗುಜರಾತ್ ಮಾದರಿಯಲ್ಲಿ ಒಳ್ಳೆಯ ಆಡಳಿತ ನೀಡುತ್ತೇವೆ ಎಂದು ಭರವಸೆ ನೀಡಿ ಈಗ ಕಷ್ಟದ ದಿನಗಳನ್ನು ತಂದಿಟ್ಟಿದ್ದಾರೆ ಎಂದು ಕಿಡಿ ಕಾರಿದರು. ಯುಪಿಎ ಸರ್ಕಾರದಲ್ಲಿ ಪೆಟ್ರೋಲ್ ಬೆಲೆ ಹೆಚ್ಚಳವಾದಾಗ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಹೇಳಿದ ಮಾತುಗಳನ್ನು ಸರಿಸಿಕೊಳ್ಳಬೇಕಿದೆ.

ಈಗ ಪೆಟ್ರೋಲ್, ಡೀಸೆಲ್ ಬೆಲೆಯನ್ನು 4 ಬಾರಿ ಹೆಚ್ಚಿಸಿದ್ದಾರೆ ಎಂದು ಹೇಳಿದರು.2014 ಮತ್ತು 2026ರ ನಡುವೆ ಅಂತಾರಾಷ್ಟ್ರೀಯ ಕಚ್ಚಾ ತೈಲದ ಬೆಲೆ ಮತ್ತು ಪೆಟ್ರೋಲ್, ಡೀಸೆಲ್, ಗ್ಯಾಸ್ ಬೆಲೆ ಏರಿಳಿತಗಳ ಅಂಕಿಅಂಶಗಳನ್ನು ನೀಡಿದರು. ತೈಲ ಬೆಲೆ ಈ ಮಟ್ಟಿಗೆ ಹೆಚ್ಚಳವಾಗಲು ಯಾರು ಕಾರಣ ಅಡುಗೆ ಅನಿಲದ ಬೆಲೆ 412 ರೂ.ನಿಂದ 915.50 ರೂ. ಹೆಚ್ಚಾಗಿದೆ. ಅಂದರೆ ಸುಮಾರು 503 ರೂ. ಏರಿಕೆಗೆ ಹೊಣೆ ಯಾರು? ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆ ದುಬಾರಿಯಾಗಿದ್ದರೂ ಪೆಟ್ರೋಲ್, ಡೀಸೆಲ್, ಗ್ಯಾಸ್ ಬೆಲೆಯನ್ನು ನಿಯಂತ್ರಣದಲ್ಲಿಡಲಾಗಿ-ತ್ತು. ಈಗ ಕಚ್ಚಾ ತೈಲದ ಬೆಲೆ ಕಡಿಮೆ ಇದ್ದರೂ ಪದೇ ಪದೇ ಬೆಲೆ ಹೆಚ್ಚಳ ಮಾಡಿ ಜನರನ್ನು ಲೂಟಿ ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ತೈಲ ಬೆಲೆ ಹೆಚ್ಚಳದಿಂದ ಹೋಟೆಲ್‌ಗಳ ತಿಂಡಿ, ಊಟದ ಬೆಲೆ ಹೆಚ್ಚಾಗುತ್ತದೆ. ರೈತರು, ಜನಸಾಮಾನ್ಯರು ಕಷ್ಟಕ್ಕೆ ಸಿಲುಕುತ್ತಾರೆ ಎಂದು ಆತಂಕ ವ್ಯಕ್ತಪಡಿಸಿದರು.ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಾತನಾಡಿ, ಕೇಂದ್ರ ಸರ್ಕಾರ ಬೆಲೆ ಏರಿಕೆ ಮಾಡುತ್ತಿದೆ. ನಾವು ಗ್ಯಾರಂಟಿಗಳನ್ನು ನೀಡುತ್ತಿದ್ದೇವೆ. ಬೆಲೆ ಏರಿಕೆಯ ಸಂದರ್ಭದಲ್ಲಿ ಒಂದು ವೇಳೆ ಗ್ಯಾರಂಟಿಗಳು ಇಲ್ಲದೇ ಇದ್ದರೆ ಜನರ ಬದುಕು ಏನಾಗುತ್ತಿತ್ತು ಎಂದು ನೆನಸಿಕೊಂಡರೆ ಭಯವಾಗುತ್ತದೆ. ಆದಾಯ ಪಾತಾಳಕ್ಕಿಳಿಯುತ್ತಿದೆ. ಖರ್ಚು ಹೆಚ್ಚಾಗುತ್ತಿದೆ ಎಂದು ಹೇಳಿದರು. ಆರ್ಧಕರ್ದ ಹೋಟೆಲ್‌ಗಳು ಮುಚ್ಚಿಹೋಗಿವೆ. ದುಬಾರಿ ಸಿಲಿಂಡರ್ ಖರೀದಿ ಮಾಡಲಾಗದೇ, ಸೌದೆ ಒಲೆಯನ್ನು ಬಳಸಲಾಗದೇ ಹೋಟೆಲ್‌ಗಳು ಸಂಕಷ್ಟಕ್ಕೆ ಸಿಲುಕಿವೆ. ಎಲ್ಲರ ಬದುಕಿಗೂ ದೊಡ್ಡ ಶಾಪವಾಗಿದೆ ಎಂದು ಹೇಳಿದರು. ಕೇಂದ್ರ ಸರ್ಕಾರ ಪ್ರತಿ ದಿನ ಜನರಿಂದ ಸಾವಿರ ಕೋಟಿ ರೂ. ಗಳನ್ನು ಲೂಟಿ ಮಾಡುತ್ತಿದೆ. ಬೇರೆ ಯಾವ ದೇಶದಲ್ಲೂ ಇಲ್ಲದಷ್ಟು ಬೆಲೆ ಏರಿಕೆ ಮಾಡಿ, ಜನ-ರಿಂದ ಪಿಕ್‌ಪ್ಯಾಕೆಟ್ ಮಾಡಲಾಗುತ್ತಿದೆ ಎಂದು ಆರೋಪಿಸಿದರು. ಬಿಜೆಪಿಯ ನಾಯಕರು ಮೊದಲು ರಾಜ್ಯ ಸರ್ಕಾರ ತೆರಿಗೆ ಕಡಿಮೆ ಮಾಡಲಿ ಎಂದು ಹೇಳುತ್ತಾರೆ. ಅವರು ನಿರಂತರವಾಗಿ ಹೆಚ್ಚಿಸುತ್ತಲೇ ಇದ್ದಾರೆ. ಮೊದಲು ಕೇಂದ್ರ ಸರ್ಕಾರದ ಮೇಲೆ ಬಿಜೆಪಿ ನಾಯಕರು ಒತ್ತಡ ಹಾಕಿ ಬೆಲೆ ಕಡಿಮೆ ಮಾಡಿಸಲಿ ಎಂದು ಸವಾಲು ಹಾಕಿದರು. ಪ್ರಧಾನಿ ಮಂತ್ರಿ ಮೋದಿಯವರು ಅಡುಗೆ ಎಣ್ಣೆ ಕಡಿಮೆ ಮಾಡಿ ಎನ್ನುತ್ತಿದ್ದಾರೆ. ಮದುವೆ ಮಾಡುವವರು ಒಂದು ತಾಳಿ ಖರೀದಿಸುವುದು ಬೇಡ ಎನ್ನುವ ಮೋದಿ ಅವರ ಉಪದೇಶವನ್ನು ಜನ ಸಮಾನ್ಯರೇ ಅರ್ಥೈಸಿಕೊಳ್ಳಬೇಕು. ಬೆಲೆ ಏರಿಕೆಯಿಂದ ಸಿಟ್ಟಿಗೆದ್ದ ಜನ ಮೋದಿ ಸರ್ಕಾರವನ್ನು ಕಿತ್ತೊಗೆಯುತ್ತಾರೆ. ದೊಡ್ಡ ಸಾಧನೆ ಮಾಡಿದ್ದೇವೆ ಎಂದು ಹೇಳಿಕೊಳ್ಳುವ ಬಿಜೆಪಿಯವರು, ಈಗ ಕಡಿಮೆ ಊಟ ಮಾಡಿ ಎಂದು ಸಲಹೆ ನೀಡುವ ಮಟ್ಟಿಗೆ ಬಂದಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು.

## ಅಂಗನವಾಡಿ ಕಂ ಕ್ರಷ್ ಕೇಂದ್ರಗಳ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಗಳಿಗೆ ಆಫ್‌ಲೈನ್ ಮುಖಾಂತರ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರಿನ ಗಿಲ್ಲೇಸೂಗೂರು ಶಿಶು ಅಭಿವೃದ್ಧಿ ಯೋಜನೆಯಡಿ 08 ಅಂಗನವಾಡಿ ಕಂ ಕ್ರಷ್ ಕೇಂದ್ರಗಳ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಅಂಗನವಾಡಿ ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಆಫ್‌ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ.**

ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಕಚೇರಿಯಲ್ಲಿ ಪಡೆದುಕೊಂಡು ಮೇ.30 ರೊಳಗಾಗಿ ಈ ಕಚೇರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾ-ರಿಗಳ ಕಾರ್ಯಾಲಯ ಗಿಲ್ಲೇಸೂಗೂರು ಯೋಜನೆ ಆಶಾಪೂರು ಕ್ರಾಸ್ ಸ್ಟೇಷನ್ ರಸ್ತೆ ರಾಯಚೂರು ಇಲ್ಲಿಗೆ ಸಂಪರ್ಕಿಸಬಹುದಾಗಿದೆ ಎಂದು ಗಿಲ್ಲೇಸೂಗೂರುಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಈದ್ಗಾ ಮತ್ತು ಖಬರ್ ಸ್ಥಾನ್ ಸುನ್ನೀ ಕಮೀಟಿಯ ಅಧ್ಯಕ್ಷರಾಗಿ ಚಿಟಿಕಿ ಎಸ್. ಮೊಹಮ್ಮದ್ ಹುಸೇನ್ ಬಾಷಾ ಆಯ್ಕೆ




ನೈಜ್ಯ ದೆಸೆ ನ್ಯೂಸ್

ಸಿರುಗುಪ್ಪ: ನಗರದ ಮುಸ್ಲಿಂ ಈದ್ಗಾ ಮತ್ತು ಖಬರ್ ಸ್ಥಾನ್ ಕಮೀಟಿಯ ಅಧ್ಯಕ್ಷರಾಗಿ **ಚಿಟಿಕಿ ಎಸ್. ಮೊಹಮ್ಮದ್ ಹುಸೇನ್ ಬಾಷಾ, ಉಪಾಧ್ಯಕ್ಷರಾಗಿ ಅಹಮದ್ ಷ-ರೀಫ್, ಕಾರ್ಯದರ್ಶಿ ಮೊಹಮ್ಮದ್ ಅಜೀಮ್, ಖಜಾಂಚಿ ಎಂ. ಖಾದರ್ ವಲಿ ಆಯ್ಕೆಯಾಗಿದ್ದಾರೆ ಎಂದು ಈದ್ಗಾ ಮತ್ತು ಖಬರ್ ಸ್ಥಾನ್ ಸುನ್ನೀ ಕಮೀಟಿಯ ಮಾಜಿ ಅಧ್ಯಕ್ಷರು ಹಂಡಿ ಹಾಶಿಮ್ ಅವರು ಈದ್ಗಾ ಮತ್ತು ಖಬರ್ ಸ್ಥಾನ್ ಸಭಾಭವನದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ ಪತ್ರಕರ್ತರಿಗೆ ಮಾಹಿತಿ ನೀಡಿದರು.**

ಈ ಸಂದರ್ಭದಲ್ಲಿ ಕಮೀಟಿಯ ಸದಸ್ಯರುಗಳಾದ ಬಾಷಾ, ಫುಜೈಲ್ ಅಹಮದ್, ಇಬ್ರಾಹಿಂಪುರ್ ಹಮೀದ್ ಸಾಬ್, ಅನ್ಸಾರಿ ಇಸಾಕ್,ಎಂ. ಖಾಜಾ, ಚೌದ್ರಿ ನಜೀರ್ ಅಹಮದ್, ಶರ್ತಿ ಶಬ್ಬೀರ್, ಡೊಳ್ಳಿ ವಲಿ ರಜಾ ಶೇಕ್ಷ ವಲಿ, ಎ.ಗೌಸೆ ರಬ್ಬಾನಿ ಮುಖಂಡರುಗಳಾದ ಹಾಜಿ ಚೌದ್ರಿ ಖಾಜಾ ಸಾಬ್, ದೇಶನೂರು ಹಾಜಿ ಅಬ್ದುಲ್ ಗಫೂರ್ ಸಾಬ್, ಮೋದಿನ್, ಹಾಜಿ ಟಿ. ಮೊಹಮ್ಮದ್ ಶಫಿ, ಹಾಜಿ ಮೊಹಮ್ಮದ್ ಇಬ್ರಾಹಿಂ, ಹಾಜಿ ಟಿಜಿ ನಿಜಾಮ್, ಮುಲ್ಲಾ ರೋಫ್, ಸಲ್ವಾತ್ ಉದ್ದೀನ್, ಸುಭಾನಿ ಇನ್ನಿತರರು ಇದ್ದರು ವರದಿ : ಮಸೀದಿ,ಅಬ್ದುಲ್ ಗೌಸ್, ಸಿರುಗುಪ್ಪ

## ಚುನಾವಣಾ ಸಿದ್ಧತೆ: ಎಸ್‌ಡಿಪಿಐ ಸಮಾಲೋಚನಾ ಸಭೆ

ನೈಜ್ಯ ದೆಸೆ ನ್ಯೂಸ್

**ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಸಿಂಧನೂರು ವತಿಯಿಂದ ಮುಂಬರುವ ಸಿ.ಎಂ.ಸಿ (ನಗರಸಭೆ/ಗ್ರಾಮ ಪಂಚಾಯತ್) ಚುನಾವಣೆಗಳ ಹಿನ್ನೆಲೆಯಲ್ಲಿ ಇಂದು ಒಂದು ಪ್ರಮುಖ ಕಾರ್ಯಕರ್ತರ ಸಮಾಲೋಚನಾ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು.**



ಈ ಸಭೆಯಲ್ಲಿ ಮುಂಬರುವ ಚುನಾವಣೆಗಳನ್ನು ನಗರದ ವಾರ್ಡ್ ಸಂಖ್ಯೆ 4 ಹಾಗೂ ಗೋಮರ್ಸಿ ಮತ್ತು ನಗರದ 5ರಿಂದ 10 ವಾರ್ಡ್ ಗಳಲ್ಲಿ ಅತ್ಯಂತ ವ್ಯವಸ್ಥಿತವಾಗಿ ಎದುರಿಸಲು ಮತ್ತು ಪಕ್ಷದ ಸಂಘಟನೆಯನ್ನು ಬಲಪಡಿಸಲು ಹಲವು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು ಹಾಗೂ ವಾರ್ಡ್ ಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ, ಕುಡಿಯುವ ನೀರು, ಮತ್ತು ಚರಂಡಿ ವ್ಯವಸ್ಥೆಗಳಂತಹ ಪ್ರಮುಖ ಸ್ಥಳೀಯ ಸಮಸ್ಯೆಗಳನ್ನು ಗುರುತಿಸಿ, ಅವುಗಳ ಪರಿಹಾರಕ್ಕಾಗಿ ನಿರಂತರ ಹೋರಾಟ ನಡೆಸಲು ತೀರ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷರಾದ ಯೂಸುಫ್ ಮೋದಿ, ವಿಧಾನಸಭಾ ಕ್ಷೇತ್ರ ಉಪಾಧ್ಯಕ್ಷರಾದ ಆಸಿಫ್ ಖುರೇಷಿ,ಕಾರ್ಯದರ್ಶಿ ಸೈಯದ್ ಇರ್ಫಾನ್,ಸಹಕಾರ್ಯದರ್ಶಿ ಯೂಸುಫ್ ಕಡ್ಡಿಪುಡಿ,ಹಾಗೂ ವಿಧಾನಸಭಾ ಕ್ಷೇತ್ರ ಸಮಿತಿಯ ಸದಸ್ಯರು ವಾರ್ಡ್ ಸಂಖ್ಯೆ 4 ಮತ್ತು ಗೋಮರ್ಸಿ ಗ್ರಾಮದ ಕಾರ್ಯಕರ್ತರು ಉಪಸ್ಥಿತರಿದ್ದರು.

## ಹೋಂ ಸ್ಟೇಗಳ ನೋಂದಣಿಗೆ ಪ್ರವಾಸೋದ್ಯಮ ಇಲಾಖೆಯಿಂದ ಸೂಚನೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಪ್ರವಾಸಿಗರ ಸುರಕ್ಷತೆ, ಗುಣ ಮಟ್ಟದ ಸೇವೆ, ಕಾನೂನು ಬದ್ಧ ನಿರ್ವಹಣೆ ಹಾಗೂ ಪ್ರವಾಸೋದ್ಯಮದ ಅಭಿವೃದ್ಧಿಯ ದೃಷ್ಟಿಯಿಂದ ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ ಸೌಲಭ್ಯ ಮತ್ತು ನಿಯಂತ್ರಣ 2015ರ ಕಾಯ್ದೆ ಪ್ರಕಾರ ಹಾಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಹೋಂ ಸ್ಟೇ ಮಾಲೀಕರು ಕಡ್ಡಾಯವಾಗಿ ಜಿಲ್ಲೆಯ ಎಲ್ಲ ಹೋಂ ಸ್ಟೇಯನ್ನು ಆನ್‌ಲೈನ್ ಮುಖಾಂತರ ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿಯನ್ನು ಮಾಡಿಕೊಳ್ಳಬೇಕೆಂದು ಕೋರಲಾಗಿದೆ.**



ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿಯಾಗದೇ ಕಾರ್ಯನಿರ್ವಸುತ್ತಿರುವ ಹೋಂಸ್ಟೇಗಳು ಕಡ್ಡಾಯವಾಗಿ ಪ್ರವಾಸೋದ್ಯಮ ಇಲಾಖೆಯಡಿ ನೋಂದಣಿ ಮಾಡಿಕೊಳ್ಳಬೇಕು. ಇಲಾಖೆಯಲ್ಲಿ ನೋಂದಣಿ ಮಾಡಿಕೊಳ್ಳದೇ ಕಾರ್ಯನಿರ್ವಹಿಸುತ್ತಿದ್ದರೆ ಅಂತಹ ಹೋಂಸ್ಟೇಗಳ ಮಾಲೀಕರು ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ(ಸೌಲಭ್ಯ ಮತ್ತು ನಿಯಂತ್ರಣ) ಕಾಯ್ದೆ 2015 ಪ್ರಕಾರ ಸರ್ಕಾರದ ಆದ-ೇಶ ಸಂಖ್ಯೆ: ಟಿಓಆರ್ 133 ಟಿಡಿಓ 2025 ಬೆಂಗಳೂರು, ದಿನಾಂಕ: 29.04.2026 ರನ್ವಯ ಕ್ರಮವಹಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ಗಣೇಶ ಗುಡಿ ಹತ್ತಿರ, ನಿಜಲಿಂಗಪ್ಪ ಕಾಲೋನಿ, ರಾಯಚೂರು-584101, ದೂರವಾಣಿ ಸಂಖ್ಯೆ: 08532 200677, ಇ-ಮೇಲ್:- adtourismrcr@gmail.com ಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಿರಳೆ"(cockroach)ಗಳು ಸಾಮಾನ್ಯ ಮತ್ತು ಗಟ್ಟಿಮುಟ್ಟಾದ ಕೀಟಗಳಾಗಿವೆ !!.

ನೈಜ್ಯ ದೆಸೆ ನ್ಯೂಸ್

**ಜಿರಳೆಗಳ ಜೀವನ ಆದಿಕಾಲದಿಂದಲೂ ಮಾನವನ ಸಂಸ್ಕೃತಿಯಲ್ಲಿ ಬೆರೆತುಕೊಂಡು ಬಂದಿದೆ ಅದರ ಹಿನ್ನೆಲೆ ಮತ್ತು ಇತಿಹಾಸವನ್ನು ನೋಡುವುದಾದರೆ ಜಿರಳೆಗಳ ಇತಿಹಾಸ ಅಚ್ಚಳಿಯದ, ಶಾಶ್ವತವಾದ ಇತಿಹಾಸವಾಗಿದೆ.**

ಜಿರಳೆಗಳು (ಅಥವಾ ಜಿರಳೆಗಳು [ 1 ] [ 2 ] [ 3 ] ) ಬ್ಲಾಟೋಡಿಯಾ (ಬ್ಲಾಟೇರಿಯಾ) ಕ್ರಮಕ್ಕೆ ಸೇರಿದ ಕೀಟಗಳಾಗಿವೆ . 4,600 ಜಿರಳೆ ಪ್ರಭೇದಗಳಲ್ಲಿ ಸುಮಾರು 30 ಜಾತಿಗಳು ಮಾನವ ಆವಾಸಸ್ಥಾನಗಳೊಂದಿಗೆ ಸಂಬಂಧ ಹೊಂದಿವೆ . ಕೆಲವು ಪ್ರಭೇದಗಳು ಪ್ರಸಿದ್ಧ ಕೀಟಗಳಾಗಿವೆ . ಆಧುನಿಕ ಜಿರಳೆಗಳು ಜುರಾಸಿಕ್ ಯುಗದ ಕೊನೆಯಲ್ಲಿ ಮೊದಲು ಕಾಣಿಸಿಕೊಂಡ ಒಂದು ಪ್ರಾಚೀನ ಗುಂಪಾಗಿದ್ದು , " ರೋಚಾಯ್ಡ್ಸ್‌ಗಳು " ಎಂದು ಕರೆಯಲ್ಪಡುವ ಅವುಗಳ ಪೂರ್ವಜರು ಸುಮಾರು 320 ಮಿಲಿಯನ್ ವರ್ಷಗಳ ಹಿಂದೆ ಕಾರ್ಬೊನಿಫೆರಸ್ ಅವಧಿಯಲ್ಲಿ ಹುಟ್ಟಿಕೊಂಡಿರಬಹುದು. ಆದಾಗ್ಯೂ, ಆ ಆರಂಭಿಕ ಪೂರ್ವಜರು ಆಧುನಿಕ ಜಿರಳೆಗಳ ಆಂತರಿಕ ಅಂಡಾಣುಗಳನ್ನು ಹೊಂದಿರಲಿಲ್ಲ.

ಜಿರಳೆಗಳು ವಿಶೇಷ ರೂಪಾಂತರಗಳನ್ನು ಹೊಂದಿರದ ಸ್ವಲ್ಪ ಸಾಮಾನ್ಯೀಕೃತ ಕೀಟಗಳಾಗಿವೆ (ಉದಾಹರಣೆಗೆ ಗಿಡಹೇನುಗಳು ಮತ್ತು ಇತರ ನಿಜವಾದ ದೋಷಗಳ ಹೀರುವ ಬಾಯಿಯ ಭಾಗಗಳು); ಅವು ಅಗಿಯುವ ಬಾಯಿಯ ಭಾಗಗಳನ್ನು ಹೊಂದಿವೆ ಮತ್ತು ಬಹುಶಃ ಜೀವಂತ ನಿಯೋಪ್ಟೆರಾನ್ ಕೀಟಗಳಲ್ಲಿ ಅತ್ಯಂತ ಪ್ರಾಚೀನವಾಗಿವೆ. ಅವು ಸಾಮಾನ್ಯ ಮತ್ತು ಗಟ್ಟಿಮುಟ್ಟಾದ ಕೀಟಗಳಾಗಿದ್ದು, ಆರ್ಕ್ಟಿಕ್ ಶೀತದಿಂದ ಉಷ್ಣವಲಯದ ಶಾಖದವರೆಗೆ ವ್ಯಾಪಕ



ಶ್ರೇಣಿಯ ಹವಾಮಾನವನ್ನು ಸಹಿಸಿಕೊಳ್ಳುವ ಸಾಮರ್ಥ್ಯ ಹೊಂದಿವೆ. ಉಷ್ಣವಲಯದ ಜಿರಳೆಗಳು ಸಾಮಾನ್ಯವಾಗಿ ಸಮಶೀತೋಷ್ಣ ಜಾತಿಗಳಿಗಿಂತ ಹೆಚ್ಚು ದೊಡ್ಡದಾಗಿರುತ್ತವೆ.

ಆಧುನಿಕ ಜಿರಳೆಗಳನ್ನು ಏಕಪಕ್ಷೀಯ ಗುಂಪು ಎಂದು ಪರಿಗಣಿಸಲಾಗುವುದಿಲ್ಲ, ಏಕೆಂದರೆ ತಳಿಶಾಸ್ತ್ರದ ಆಧಾರದ ಮೇಲೆ ಗೆದ್ದಲುಗಳು ಗುಂಪಿನೊಳಗೆ ಆಳವಾಗಿ ಗೂಡುಕಟ್ಟಿರುತ್ತವೆ ಎಂದು ಕಂಡುಬಂದಿದೆ, ಕೆಲವು ಜಿರಳೆಗಳ ಗುಂಪುಗಳು ಇತರ ಜಿರಳೆಗಳಿಗಿಂತ ಗೆದ್ದಲುಗಳಿಗೆ ಹೆಚ್ಚು ನಿಕಟ ಸಂಬಂಧ ಹೊಂದಿವೆ, ಹೀಗಾಗಿ ಬ್ಲಾಟೇರಿಯಾ ಪ್ಯಾರಾಫೈಲೆಟಿಕ್ ಅನ್ನು ನೀಡುತ್ತದೆ. ಜಿರಳೆಗಳು ಮತ್ತು ಗೆದ್ದಲುಗಳು ಎರಡೂ ಬ್ಲಾಟೋಡಿಯಾದಲ್ಲಿ ಸೇರಿವೆ. ಗುಂಪುಗೂಡುವ ಜರ್ಮನ್ ಜಿರಳೆ ಮುಂತಾದ ಕೆಲವು ಪ್ರಭೇದಗಳು ಸಾಮಾನ್ಯ ಆಶ್ರಯ, ಸಾಮಾಜಿಕ ಅವಲಂಬನೆ, ಮಾಹಿತಿ ವರ್ಗಾವಣೆ ಮತ್ತು ರಕ್ತಸಂಬಂಧ ಗುರುತಿಸುವಿಕೆಯನ್ನು ಒಳಗೊಂಡ ವಿಸ್ತಾರವಾದ ಸಾಮಾಜಿಕ ರಚನೆಯನ್ನು ಹೊಂದಿವೆ. ಪ್ರಾಚೀನ ಕಾಲದಿಂದಲೂ ಜಿರಳೆಗಳು ಮಾನವ ಸಂಸ್ಕೃತಿಯಲ್ಲಿ ಕಾಣಿಸಿಕೊಂಡಿವೆ.

ಅವುಗಳನ್ನು ದೊಡ್ಡ, ಕೊಳಕು ಕೀಟಗಳಾಗಿ ಜನಪ್ರಿಯವಾಗಿ ಚಿತ್ರಿಸಲಾಗಿದೆ, ಆದ-ಾಗ್ಯೂ ಹೆಚ್ಚಿನ ಪ್ರಭೇದಗಳು ಚಿಕ್ಕದಾಗಿರುತ್ತವೆ ಮತ್ತು ಹಾನಿಕಾರಕವಲ್ಲ ಮತ್ತು ಪ್ರಪಂಚದಾದ್ಯಂತ ವ್ಯಾಪಕ ಶ್ರೇಣಿಯ ಆವಾಸಸ್ಥಾನಗಳಲ್ಲಿ ವಾಸಿಸುತ್ತವೆ. ಜಿರಳೆಗಳ ನಿಯಂತ್ರಣ: ಅಡುಗೆ ಮನೆಯನ್ನು ಸ್ವಚ್ಛವಾಗಿರುವುದು, ಕಸದ ಬುಟ್ಟಿಯನ್ನು ಮುಚ್ಚಿಡುವುದು ಮತ್ತು ಆಹಾರ ಪದಾಥ-ರ್ಗಳನ್ನು ಭದ್ರವಾಗಿ ಸಂಗ್ರಹಿಸುವುದು, ಬೇವಿನ ಎಲೆ, ಲವಂಗ, ವಿನೆಗರ್, ಬಳಕೆ ಅಂತಹ ನೈಸರ್ಗಿಕ ಮನೆಮದ್ದುಗಳು ಉತ್ತಮ.

ಹೀಗೆ ಕೆಲವು ವಿಧಾನಗಳ ಮೂಲಕ ಜಿರಳೆಗಳನ್ನು ನಿಯಂತ್ರಣದಲ್ಲಿ ಇಡಬಹುದು. ಹೀಗೆ ಜಿರಳೆಗಳು ಸಾವಿರಾರು ವರ್ಷಗಳಿಂದ ನಿಸರ್ಗದ ಹೊಡೆತಕ್ಕೆ ತಡೆದು ನಿಂತ ಮಹಾನ ಕೀಟವಾಗಿದೆ ಅಂದಿನಿಂದ ಇಂದಿನವರೆಗೂ ಬದುಕುಳಿದ ಜೀವಿಯಾಗಿದೆ ಆ ಜೀವಿಯು ಕೂಡ ಮಾನವನ ಸಂಸ್ಕೃತಿಯಲ್ಲಿ ಬೆರೆತು ಹೋಗಿದೆ ಜಿರಳೆಯ ಗಟ್ಟಿತನವನ್ನು ಎಲ್ಲರೂ ಅರ್ಥೈಸಿಕೊಳ್ಳಬೇಕಾಗಿದೆ. ಸುಭಾಸ ಹರ್ವಾಪೂರ ಪತ್ರಕರ್ತರು ಸಿಂಧನೂರು

## ಸಾಹಿತ್ಯ ಸಿಂಚನ

ಸ್ನೇಹ

ಸ್ನೇಹವೆಂದರೆ ಸೂರ್ಯನ ಕಿರಣ,
ಮನದ ಕತ್ತಲೆಗೆ ಬೆಳಕಿನ ಸ್ಪಂದನ.
ನಗು ಬಂದು ಹೃದಯ ತೇಲಿಸುವ ಶಕ್ತಿ,
ದುಃಖ ಬಂದಾಗ ಧೈರ್ಯ ನೀಡುವ ಭಕ್ತಿ

ಮಾತಿಲ್ಲದ ಮನಸಿನ ಭಾಷೆ ಸ್ನೇಹ,
ಕಾಲ ಕಳೆದರೂ ಕಡಿಮೆಯಾಗದ ನೆಹೆ.
ಹಾದಿ ತಪ್ಪಿದಾಗ ದಾರಿ ತೋರಿಸುವ ಕೈ,
ಜೀವನ ಪಯಣದಲ್ಲಿ ಜೊತೆ ನಡೆಯುವ ಮೈ.

ಸಂಪತ್ತಿಗಿಂತ ಮಿಗಿಲಾದ ಬಂಧ,
ಸ್ವಾರ್ಥವಿಲ್ಲದ ಮಮತೆಯ ಸುಗಂಧ.
ಸತ್ಯದ ನೆರಳಲ್ಲಿ ಬೆಳೆದ ಈ ನಂಟು,
ಎಂದೆಂದಿಗೂ ಉಳಿಯಲಿ ನಮ್ಮ ಸ್ನೇಹ ಬಂಟು.

**ರವಿಕುಮಾರ್**

# ಪ್ರಥಮ ಪಿಯುಸಿ ಪ್ರವೇಶ: ಮೇ.27ರಂದು ಕೌನ್ಸಲಿಂಗ್

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2026-27ನೇ ಸಾಲಿಗಾಗಿ ರಾಯಚೂರು ಜಿಲ್ಲೆಯಲ್ಲಿರುವ ಅಲ್ಪಸಂಖ್ಯಾತರ ವಿವಿಧ ಕಾಲೇಜುಗಳಲ್ಲಿ ಪ್ರಥಮ ಪಿಯುಸಿ ದಾಖಲಾತಿಗಾಗಿ ಮೇ.27ರಂದು ಕೌನ್ಸಲಿಂಗ್ ಹಮ್ಮಿಕೊಳ್ಳಲಾಗಿದ್ದು, ಮೆರಿಟ್‌ನಲ್ಲಿ ಅರ್ಹತೆ ಪಡೆದು ಆಯ್ಕೆಯಾದ ವಿದ್ಯಾರ್ಥಿಗಳು ವಿದ್ಯಾರ್ಥಿಗಳು ಕೌನ್ಸಲಿಂಗ್‌ಗೆ ಕಡ್ಡಾಯವಾಗಿ ಹಾಜರಾಗುವಂತೆ ಕೋರಲಾಗಿದೆ.**



ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ. ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಕಾಲೇಜು ಹಾಗೂ ಮೌಲಾನಾ ಆಜಾದ್ ಕಾಲೇಜುಗಳಲ್ಲಿ ಪ್ರಥಮ ಪಿಯುಸಿ ದಾಖಲಾತಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳಿಗೆ ಮೆರಿಟ್‌ನಲ್ಲಿ ಅರ್ಹತೆ ಪಡೆದು ಆಯ್ಕೆಯಾದ ವಿದ್ಯಾರ್ಥಿಗಳಿಗೆ ಮೇ.27ರಂದು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜು,

ಬೋಳಮಾನದೊಡ್ಡಿ ರಸ್ತೆ ರಾಯಚೂರಿನಲ್ಲಿ ಬೆಳಿಗ್ಗೆ 9:30 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಅಲ್ಪಸಂಖ್ಯಾತರ ಸಮಯದಾಯದ ವಿದ್ಯಾರ್ಥಿನಿಯರಿಗೆ (ಬಾಲಕಿಯರು) ಹಾಗೂ ಮಧ್ಯಾಹ್ನ 12 ಗಂಟೆಯಿಂದ 2 ಗಂಟೆಯವರೆಗೆ ಅಲ್ಪಸಂಖ್ಯಾತರ ಸಮಯದಾಯದ ವಿದ್ಯಾರ್ಥಿಗಳಿಗೆ (ಬಾಲಕರು) ಕೌನ್ಸಲಿಂಗ್ ನಡೆಯಲಿದೆ. ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಬೋಳಮಾನದೊಡ್ಡಿ ರಸ್ತೆ ರಾಯಚೂರಿನಲ್ಲಿ ಬೆಳಿಗ್ಗೆ 9:30 ರಿಂದ ಮಧ್ಯಾಹ್ನ 12 ಗಂಟೆಯವರೆಗೆ

ಎಸ್.ಸಿ, ಎಸ್.ಟಿ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಯರಿಗೆ (ಬಾಲಕಿಯರು) ಮಧ್ಯಾಹ್ನ 12 ಗಂಟೆಯಿಂದ 2 ಗಂಟೆಯವರೆಗೆ ಎಸ್.ಸಿ, ಎಸ್.ಟಿ ಹಾಗೂ ಹಿಂದುಳಿದ ವರ್ಗಗಳ ಬಾಲಕ ವಿದ್ಯಾರ್ಥಿಗಳಿಗೆ ಕೌನ್ಸಲಿಂಗ್ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ ತಮ್ಮ ಹತ್ತಿದ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ, ಡಾ. ಎಪಿಜೆ, ಅಬ್ದುಲ್ ಕಲಾಂ ವಸತಿ ಕಾಲೇಜು ಹಾಗೂ ಮೌಲಾನಾ ಆಜಾದ್ ಕಾಲೇಜು ಹಾಗೂ ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ, ರಾಯಚೂರು ಮೊಬೈಲ್ ಸಂಖ್ಯೆ: 9731028420, ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ದೇವದುರ್ಗ ಮೊಬೈಲ್ ಸಂಖ್ಯೆ: 9148233616, ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಲಿಂಗಸೂಗೂರು ಉಪ ವಿಭಾಗದ ಮೊಬೈಲ್ ಸಂಖ್ಯೆ: 886447863 & 8197540046, ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಮಾನವಿ ಮೊಬೈಲ್ ಸಂಖ್ಯೆ: 8867334785 ಅಥವಾ ಜಿಲ್ಲಾ ಅಲ್ಪಸಂಖ್ಯಾತರ ಕಚೇರಿಗೆ ಭೇಟಿ ನೀಡಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇರಾನ್ ಯುದ್ಧಾಂತ್ಯ ಒಪ್ಪಂದ : ರಾಗ ಬದಲಿಸಿದ ಟ್ರಂಪ್

**ನೈಜ್ಯ ದೆಸೆ ನ್ಯೂಸ್**

**ವಾಷಿಂಗ್ಟನ್: ಸಂಘರ್ಷಕ್ಕೆ ಅಂತ್ಯ ಹಾಡುವ ಹಿನ್ನೆಲೆಯಲ್ಲಿ ಇರಾನ್ ಜೊತೆ ಒಪ್ಪಂದ ಮುಕ್ತಾಯಗೊಂಡಿದೆ. ಒಪ್ಪಂದ ನಿಯಮಗಳನ್ನು ಶೀಘ್ರದಲ್ಲಿ ಪ್ರಕಟಿಸಲಾಗುವುದು ಎಂದಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉಲ್ಟಾ ಹೊಡೆದಿದ್ದಾರೆ. ಇರಾನ್ ಜೊತೆ ಒಪ್ಪಂದ ಮಾಡಿಕೊಳ್ಳಲು ಯಾವುದೇ ಕಾರಣಕ್ಕೂ ಆತುರ ಪಡಬೇಡಿ ಎಂದು ಅಮೆರಿಕದ ಸಂಧಾನಕಾರರಿಗೆ ಸಂದೇಶ ರವಾನಿಸಿದ್ದಾರೆ, ಹೀಗಾಗಿ ಕ್ಷಣಕ್ಕೊಂದು ಗಳಿಗೆಗೊಂದು ಹೇಳಿಕೆ ನೀಡುತ್ತಾ ಮತ್ತಷ್ಟು ಗೊಂದಲಕ್ಕೆ ಸಿಲುಕಿಸುವ ಪ್ರಯತ್ನ ನಡೆಸಿದ್ದಾರೆ.**



ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು ಇರಾನ್ ಜೊತೆ ಚರ್ಚೆಯಲ್ಲಿರುವ ಒಪ್ಪಂದ 60 ದಿನಗಳ ಕದನ ವಿರಾಮ ವಿಸ್ತರಣೆ, ಹೋರ್ಮುಜ್ ಜಲಸಂಧಿ ಮತ್ತೆ ತೆರೆಯುವುದು ಮತ್ತು ಇರಾನ್‌ನ ಪರಮಾಣು ಕಾರ್ಯಕ್ರಮದ ಕುರಿತು ಹೆಚ್ಚಿನ ಮಾತುಕತೆಗಳ ಯೋಜನೆ ಒಳಗೊಂಡಿದೆ ಎಂದು ಹೇಳಿ ಈಗ ಒಪ್ಪಂದ ಮಾಡಿಕೊಳ್ಳಲು ಆತುರ ಪಡಬೇಡಿ ಎಂದಿದ್ದಾರೆ. ಇರಾನ್ ಜೊತೆ "ರಚನಾತ್ಮಕ" ಮಾತುಕತೆಗಳು ನಡೆಯುತ್ತಿವೆ. ಆದರೆ "ಎರಡೂ ಕಡೆಯವರು ತಮ್ಮ ಸಮಯವನ್ನು ತೆಗೆದುಕೊಂಡು ಅದನ್ನು ಸರಿಯಾದ ನಿರ್ಧಾರ ತೆಗೆದುಕೊಳ್ಳಬೇಕು, ಹೀಗಾಗಿ ಅಮೆರಿಕ ಸಂಧಾನಕಾರರು ಆತುರ ಪಡಬೇಡಿ ಎಂದು ಹೇಳಿದ್ದಾರೆ. ಶಾಂತಿ ಒಪ್ಪಂದದ ಕುರಿತು "ಹೆಚ್ಚಾಗಿ ಮಾತುಕತೆ ನಡೆಸಲಾಗಿದೆ.", ಈ ಬಗ್ಗೆ ಶೀಘ್ರ ಘೋಷಣೆ ಮಾಡಲಾಗುವುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ವಿದೇಶಾಂಗ ಕಾರ್ಯದರ್ಶಿ ಮಾರ್ಕ್ ರುಬಿಯೋ ಹೇಳಿದ್ದರು. ಇರಾನಿನ ಅಧಿಕಾರಿಗಳು ವಾರಾಂತ್ಯದಲ್ಲಿ ಮಾತುಕತೆಗಳಲ್ಲಿ ಪ್ರಗತಿ ನಡೆಯುತ್ತಿದೆ, ಅಮೆರಿಕದ ಷರತ್ತು ಒಪ್ಪಲು ಸಾಧ್ಯವಿಲ್ಲ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮಾಯಿಲ್ ಬಘೈ ಹೇಳಿದ್ದರು. ಅಮೆರಿಕದ ಮಾಧ್ಯಮಗಳ ಪ್ರಕಾರ, ಚರ್ಚಿಸಲಾದ ಒಪ್ಪಂದ ಅಂತಿಮ ಇತ್ಯರ್ಥವಲ್ಲ, ಬದಲಾಗಿ ಕೆಲವು ಕಠಿಣ ಸಮಸ್ಯೆ ನಂತರ ಮಾತುಕತೆಯಿಂದ ಹಿಂದೆ ಸರಿಯಲಾಗಿದೆ. ಇರಾನ್‌ನ ನಿರ್ಬಂಧಗಳ ಪರಿಹಾರಕ್ಕಾಗಿ ಬೇಡಿಕೆ, ಹೆಪ್ಪುಗಟ್ಟಿದ ಇರಾನಿನ ನಿಧಿಗಳನ್ನು ಬಿಡುಗಡೆ ಮಾಡಬೇಕೆಂಬ ಕರೆಗಳು ಮತ್ತು ಇರಾನ್ ತನ್ನ ಪರಮಾಣು ಮಹತ್ವಾಕಾಂಕ್ಷೆಗಳನ್ನು ನಿಗ್ರಹಿಸಲು ಶ್ರಮಿಸುತ್ತಿದೆ ಎಂದು ಹೇಳಿವೆ. ಸೆನೆಟರ್ ಟೆಡ್ ಕ್ರೂಜ್ ಪ್ರತಿಕ್ರಿಯಿಸಿ ಸೆನೆಟ್ ಸಶಸ್ತ್ರ ಸೇವೆಗಳ ಸಮಿತಿಯ ಅಧ್ಯಕ್ಷರಾಗಿರುವ ರೋಜರ್ ವಿಕರ್, 60 ದಿನಗಳ ಕದನ ವಿರಾಮ "ಆಪರೇಷನ್ ಎಪಿಕ್ ಫ್ಯೂರಿಯಿಂದ ಸಾಧಿಸಲ್ಪಟ್ಟ ಎಲ್ಲವೂ ವ್ಯರ್ಥ ಎಂದು ಹೇಳಿದ್ದಾರೆ. ಫೆಬ್ರವರಿ 28 ರಂದು ಅಮೆರಿಕ ಮತ್ತು ಇಸ್ರೇಲ್, ಇರಾನ್ ಮೇಲೆ ವ್ಯಾಪಕ ದಾಳಿ ನಡೆಸಲಾಗಿತ್ತು, ಇದರಿಂದ ಯುದ್ಧ ಆರಂಭವಾಗಿತ್ತು.

# 'ದುಡ್ಡಿನ ಆಟ ಬಲ್ಲವರಾರು' ಚಲನಚಿತ್ರದ ಚಿತ್ರೀಕರಣ ಮುಕ್ತಾಯ



**ನೈಜ್ಯ ದೆಸೆ ನ್ಯೂಸ್**

**ಮೈಸೂರು: ಮೈಸೂರ್ ಫಿಲಂ ಮೇಕರ್ಸ್‌ರವರ ಚೊಚ್ಚಲ ಕನ್ನಡ ಚಲನಚಿತ್ರ 'ದುಡ್ಡಿನ ಆಟ ಬಲ್ಲವರಾರು' ಕನ್ನಡ ಚಲನಚಿತ್ರದ ಚಿತ್ರೀಕರಣವು ಚಿಕ್ಕಪಾಳ್ಯ ಗ್ರಾಮದ ಬಂದಂತಮ್ಮ ದೇವಸ್ಥಾನದಲ್ಲಿ ಮದುವೆಯ ದೃಶ್ಯದ ಚಿತ್ರೀರಣದೊಂದಿಗೆ ಕುಂಬಳಕಾಯಿ ಒಡೆಯುವ ಮೂಲಕ ಸಂಪೂರ್ಣ ಮುಕ್ತಾಯವಾಯಿತು.**

ಮಧ್ಯಮವರ್ಗದ ಕುಟುಂಬದಲ್ಲಿ ದುಡ್ಡು ಇಲ್ಲದಿರುವಾಗ ಮತ್ತು ದುಡ್ಡಿದ್ದಾಗ ಬದುಕಿನಲ್ಲಾಗುವ ಏರುಪೇರುಗಳು ನೋವು ನಲಿವುಗಳು , ಒಳಿತು ಕೆಡಕುಗಳನ್ನ ಸಮಾಜಕ್ಕೆ ತಿಳಿಸುವದೇ ಚಿತ್ರದ ಸಾರವಾಗಿದೆ. ಚಿತ್ರೀಕರಣವು ಗಂಜಾಂ ಚಿಕ್ಕಪಾಳ್ಯ ,ಮೇಲುಕೋಟೆ ,ಮಹಾದೇವಪುರ ,ದೊಡ್ಡಪಾಳ್ಯ ಕರಿಘಟ್ಟ , ಶ್ರೀರಂಗಪಟ್ಟಣ ಮೊದಲಾದ ಸ್ಥಳಗಳಲ್ಲಿ ನಡೆದಿದೆ. ಡಬ್ಬಿಂಗ್ ಕಾರ್ಯಗಳು ಈ ವಾರ ಆರಂಭಗೊಳ್ಳುತ್ತಿದೆ. ಅದಕ್ಕಾಗಿ ಭರದ ಸಿದ್ಧತೆಗಳು ನಡೆದಿವೆ ಎಂದು ನಿರ್ದೇಶಕ ಎಸ್ ಕೆ ಬಾಬು ತಿಳಿಸಿದರು. ತಾರಾ ಬಳಗದಲ್ಲಿ ಎಂಜಿಎನ್ ಪ್ರಸಾದ್, ಸೌಮ್ಯಮಲ್ಲಿಕ್, ಎಸ್ ಕೆ ಬಾಬು, ಸುಪ್ರಿಯಾ ರೆಡ್ಡಿ, ಆನಂದ್, ಮಂಜುಳಾ, ಸುಪ್ರಿಯ, ಜೆಟ್ ಆನಂದ್ , ಅಮೂಲ್ಯ ,ಮಾನ್ಯ ,ಮಹೇಂದ್ರ ,ಲೋಕೇಶ್ ,ವೆಂಕಟೇಶ್ ,ಶೋಭಾ ,ಮಂಡ್ಯ ಆನಂದ್, ಯಶೋದಮ್ಮ ,ಪ್ರಶಾಂತ್ ,ನಂಜೇಗೌಡ ,ಪುರುಷೋತ್ತಮ ಮೊದಲಾದವರಿದ್ದಾರೆ.

ಛಾಯಾಗ್ರಹಣ ಸದಾಶಿವ ಹಿರೇಮಠ, ಸಂಕಲನ ಮಹೇಂದ್ರ ಮಹಾದೇವ, ಸಂಗೀತ ಮನೋರಾವ್, ನೃತ್ಯ ನಿರ್ದೇಶಕರು ಪ್ರದೀಪ್ ಮತ್ತು ಮೈಸೂರು ಪ್ರೇಮ್, ವರ್ಣಾಲಂಕಾರ ರಾಜು, ಸಾಹಸ ಧರ್ಮ, ಪತ್ರಿಕಾಸಂಪರ್ಕ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ, ಸಹ ನಿರ್ದೇಶನ ಆನಂದ್ ,ಅಸೋಸಿಯೇಟ್ ಪಲ್ಲವಿ , ಕಾರ್ಯಕಾರಿ ನಿರ್ವಹಣೆ ಸುನಿಲ್ ಡಿಸೋಜಾ ಆಗಿದ್ದು, ಕಥೆ ?ಚಿತ್ರಕಥೆ- ಸಾಹಿತ್ಯ-ಸಂಭಾಷಣೆ ಜೊತೆಗೆ ನಿರ್ದೇಶನ ಹೊಣೆ ಎಸ್ ಕೆ ಬಾಬು ಬೆಳಗುಳ ಅವರದ್ದಾಗಿದೆ. ಚಿತ್ರಕ್ಕೆ ಮೈಸೂರು ಫಿಲಂ ಮೇಕರ್ಸ ಗ್ರೂಪ್ ಬಂಡವಾಳ ಹೂಡಿದ್ದಾರೆ. ಆದಷ್ಟು ಬೇಗ ಚಿತ್ರ ತೆರೆಗೆ ತರುವ ಆಲೋಚನೆ ನಿರ್ಮಾಪಕರದ್ದಾಗಿದೆ. -ಡಾ.ಪ್ರಭು ಗಂಜಿಹಾಳ.

# ಸೊಳ್ಳೆಯಿಂದ ಹರಡುವ ಖಾಯಿಲೆಗಳ ತಡೆಗೆ ಸಾರ್ವಜನಿಕರು ಸಹಕರಿಸಿ: ಡಾ.ಸುರೇಂದ್ರ ಬಾಬು

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಕಳೆದ 2-3 ದಿನಗಳಿಂದ ಜಿಲ್ಲೆಯಾದ್ಯಂತ ಸುರಿದ ಅಕಾಲಿಕ ಮಳೆಯಿಂದ ತಗ್ಗು ಗುಂಡಿಗಳು ಸೇರಿದಂತೆ ಅಲ್ಲಲ್ಲಿ ನೀರು ನಿಲ್ಲುವುದರಿಂದ ಡೆಂಗ್ಯು ಹರಡುವ ಈಡಿಸ್ ಇಜಿಪ್ಟೈ ಸೊಳ್ಳೆಯ ಸಂತತಿ ಹೆಚ್ಚಾಗುವ ಸಾಧ್ಯತೆ ಇದೆ.**

ಇದರಿಂದ ಸಂಭಾವ್ಯ ಡೆಂಗ್ಯು ಪ್ರಕರಣಗಳು ಕಂಡು ಬರುವ ಸಾಧ್ಯತೆಗಳಿದ್ದು, ಸಾರ್ವಜನಿಕರು ಮನೆಯ ಸುತ್ತಲು ನೀರು ನಿಲ್ಲದಂತೆ ನೋಡಿಕೊಳ್ಳುವ ಜೊತೆಗೆ ಬಳಕೆಗಾಗಿ ನೀರು ತುಂಬುವ ಡ್ರಮ್, ಬ್ಯಾರೆಲ್, ಕಲ್ಲಿನ ಡೋಣಿ ಮುಂತಾದ ಪರಿಕರಗಳನ್ನು ವಾರಕ್ಕೊಮ್ಮೆ ಸ್ವಚ್ಚಗೊಳಿಸಿ ಮತ್ತು ಯಾರಿಗಾದರೂ ಒಂದೇ ದಿನ ಜ್ವರ ಕಂಡು ಬಂದರೂ ಸಹ ವೈದ್ಯರ ಬಳಿ ಪರೀಕ್ಷಿಸಿ ಅಗತ್ಯ ಚಿಕಿತ್ಸೆ ಪಡೆಯಿರಿ ಎಂದು ಸಾರ್ವಜನಿಕರಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರ ಬಾಬು ಅವರು ಕೋರಿದ್ದಾರೆ.



ಮನೆಯ ಒಳಗಿನ ಸಾಮಗ್ರಿಗಳನ್ನು ನಿಗಾ ವಹಿಸಿದಂತೆ ಮನೆಯ ಹೊರಗೆ ನೀರು ಸುತ್ತಲು ನೀರು ಸಂಗ್ರಹವಾಗುವ ಪ್ಲಾಸ್ಟಿಕ್ ಕಪ್, ತಗಡಿನ ಟಿನ್, ತೆಂಗಿನ ಚಿಪ್ಪು, ಒಡೆದ ಮಡಿಕೆ, ಬಿಸಾಡಿದ ಟೈರ್, ಮುಂತಾದ ತ್ಯಾಜ್ಯವನ್ನು ವಿಲೇವಾರಿ ಮಾಡುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಮನೆಯಲ್ಲಿರುವ ಚಿಕ್ಕ ಮಕ್ಕಳು, ಗರ್ಭಿಣಿಯರು, ವಯೋವೃದ್ದರು, ಬಾಣಂತಿಯರಿಗೆ ಸೊಳ್ಳೆ ಕಡೆಯದಂತೆ ಕಾಳಜಿ ತೆಗೆದುಕೊಳ್ಳಿ ನಿರ್ಲಕ್ಷ್ಯ ವಹಿಸಬಾರದು. ತಕ್ಷಣ ಪರೀಕ್ಷೆ ಮಾಡಿಸಿಕೊಳ್ಳಿ: ಸಾಮಾನ್ಯವಾಗಿ ಜ್ವರವನ್ನು ನಾವು ನಿರ್ಲಕ್ಷಿಸುತ್ತೇವೆ. ಇಂತಹ ಸಂದರ್ಭಗಳಲ್ಲಿ ಡೆಂಗ್ಯು ಸಂಬಂಧಿತ ಜ್ವರವಾಗಿದ್ದರೆ ರೋಗಿಯು ಪ್ಲೇಟ್‌ಲೆಟ್ಸ್‌ಗಳ ಶೀಘ್ರ ಕುಸಿಯುವಿಕೆಯಿಂದ ಆರೋಗ್ಯ ಸಮಸ್ಯೆ ಎದುರಾಗಿ ರಕ್ತಸ್ರಾವದಂತಹ ಗಂಭಿರ ಸಮಸ್ಯೆ ಎದುರುಸ ಬೇಕಾಗಬಹುದು.

ಕಾರಣ ಯಾರಿಗಾದರೂ 3 ದಿನಗಳ ಕಡಿಮೆಯಾಗದ ಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ವಿಪರೀತ ನೋವು ಕಾಣಿಸಿಕೊಂಡಲ್ಲಿ ನಿರ್ಲಕ್ಷಿಸಿದೆ ಹತ್ತಿರದ ಆರೋಗ್ಯ ಕೇಂದ್ರಕ್ಕೆ ಬೇಟಿ ನೀಡಿ ಅಗತ್ಯ ಪರೀಕ್ಷೆ ಮಾಡಿಸಿ ವೈದ್ಯರ ಸಲಹೆಯಂತೆ ಲಕ್ಷಣಗಳ ಆಧಾರದ ಮೇರೆಗೆ ಚಿಕಿತ್ಸೆ ಪಡೆಯಬೇಕು.

ಲಾರ್ವಾ ಸಮೀಕ್ಷೆಗೆ ಸಹಕರಿಸಿ: ಜಿಲ್ಲಾ ರೋಗ ವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ.ಚಂದ್ರಶೇಖರಯ್ಯ ಸ್ವಾಮಿ ಅವರ ನೇತೃತ್ವದಲ್ಲಿ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ದಂದು ಸೊಳ್ಳೆಗಳ ಉತ್ಪತಿ ತಾಣಗಳನ್ನು ಗುರ್ತಿಸಿ ನಾಶಗೊಳಿಸಲು ಸಿಬ್ಬಂದಿಯವರಿಂದ ಲಾರ್ವಾ ಸಮೀಕ್ಷೆ ಕೈಗೊಳ್ಳಲಾಗುತ್ತಿದ್ದು, ಸಾರ್ವಜನಿಕರು ಪರಿಕರಗಳಿಗೆ ಮುಚ್ಚಳ ಮುಚ್ಚಿ ಬಟ್ಟೆ ಕಟ್ಟಿ, ಬಳಕೆ ಮಾಡದ ನೀರು ಸಂಗ್ರಹಕಗಳಿಗೆ ಕೊಬ್ಬರಿ ಎಣ್ಣೆಯನ್ನು ಹಾಕುವ ಮೂಲಕ ಸೊಳ್ಳೆ ಉತ್ಪತ್ತಿ ತಡೆಯಬೇಕು. ಬಳಸದಿರುವ ನೀರು ನಿಲ್ಲುವ ಸ್ಥಳಗಳಲ್ಲಿ ಸುಟ್ಟ ಆಯಿಲ್ ಹಾಕಲು ಹಾಗೂ ಅಗತ್ಯವಿರುವಲ್ಲಿ ಟೆಮೋಪಾಸ್ ದ್ರಾವಣ ಹಾಕಲು ಕ್ರಮ ವಹಿಸಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬ್ಲಾಕ್ ಕಾರ್ಮಿಕ ವಿಭಾಗದ ಅಧ್ಯಕ್ಷರಾಗಿ ಗೋವಿಂದ ಚೌವ್ಹಾಣ್ ನೇಮಕ

**ನೈಜ್ಯ ದೆಸೆ ನ್ಯೂಸ್**

**ಅರಕೇರಾ: ರಾಯಚೂರು ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ವಿಭಾಗದ ಜಿಲ್ಲಾಧ್ಯಕ್ಷ ಎ.ಉರುಕುಂದಪ್ಪ ಅವರ ಆದೇಶದಂತೆ.ಅರಕೇರಾ ಬ್ಲಾಕ್ ಕಾರ್ಮಿಕ ವಿಭಾಗದ ಅಧ್ಯಕ್ಷರನ್ನಾಗಿ ಗೋವಿಂದ ಚೌವ್ಹಾಣ್ ಅವರನ್ನು ನೇಮಿಸಲಾಗಿದೆ.**

ಈ ನೇಮಕಾತಿಯು ರಾಯಚೂರು ಸಂಸದ ಜಿ.ಕುಮಾರನಾಯಕ,ಶ್ರೀಮತಿ ಶ್ರೀದೇವಿ ಆರ್ ನಾಯಕ ದೇವದುರ್ಗ ವಿಧಾನ ಸಭಾ ಕ್ಷೇತ್ರ ಪರಾಜಿತ ಅಭ್ಯರ್ಥಿ ಹಾಗೂ ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿಗಳು ಹಾಗೂ ವಿರೇಶ ನಾಯಕ ಅರಕೇರಾ ಬ್ಲಾಕ್ ಅಧ್ಯಕ್ಷರು



ಇವರುಗಳ ಆದೇಶದ ಮೇರೆಗೆ ಗೋವಿಂದ ಚೌವ್ಹಾಣ ಇವರನ್ನು ಅರಕೇರಾ ಬ್ಲಾಕ್ ಕಾರ್ಮಿಕ ವಿಭಾಗ ತಾಲೂಕು ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.

ಪಕ್ಷದ ತತ್ವ ಸಿದ್ಧಾಂತಗಳಿಗೆ ಬದ್ಧಾರಗಿ ಯಾವುದೇ ಬೇರೆ ರಾಜಕೀಯ ಆಸೆ ಅಮೀಷಗಳಿಗೆ ಒಳಗಾಗದೆ ಸಾಮಾಜಿಕ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಲು ಈ ಮೂಲಕ ತಮಗೆ ತೀಲಿಸಿತ್ತಾ ಜಾತಿ ಧರ್ಮ ಮೇಲುಕೀಳು ಹಾಗೂ ಯಾವುದೇ ಕಲಹ ಬಾರದ ರೀತಿಯಲ್ಲಿ ಪ್ರಮಾಣಿಕವಾಗಿ ಕೆಲಸ ಮಾಡಬೇಕೆಂದು, ತಕ್ಷಣದಿಂದ ತಮಗೆ ನೀಡಿರುವ ಜವಾಬ್ದಾರಿಯನ್ನು ವಹಿಸಿಕೊಂಡು ಪಕ್ಷದ ಬಲವರ್ದನೆಗೆ ಮಾಡಲು ಈ ಮೂಲಕ ಜವಾಬಾರಿಯನ್ನು ನೀಡುತೇವೆ. ಅರಕೇರಾ ಪಟ್ಟಣದಲ್ಲಿ ಶ್ರೀದೇವಿ ಆರ್ ನಾಯಕರವರ ನಿವಾಸದಲ್ಲಿ ಅರಕೇರಾ ಬ್ಲಾಕ್ ಕಾರ್ಮಿಕ ವಿಭಾಗದ ಅಧ್ಯಕ್ಷರನ್ನಾಗಿ ಗೋವಿಂದ ಚೌವ್ಹಾಣ್ ಅವರಿಗೆ ಆದೇಶ ಪತ್ರ ನೀಡಿ ಸನ್ಮಾನಿಸಲಾಯಿತು, ಸಂದರ್ಭದಲ್ಲಿ ನಿಂಗಣ್ಣ ಹವಲ್ದಾರ ಕಾಂಗ್ರೆಸ್ ಮುಖಂಡರು ಹಾಗೂ ಕರ್ಯಕರ್ತರು ಭಾಗವಹಿಸಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಕ್ಷೇತ್ರ ಅಧ್ಯಯನ ಮತ್ತು ಪ್ರಾಯೋಗಿಕ ಕಾರ್ಯಾಗಾರ ಉದ್ಘಾಟನೆ ವಿದ್ಯಾರ್ಥಿಗಳು ಸಮಾಜಮುಖಿ ನಾಯಕರಾಗಬೇಕು: ಫಾ. ವಿನೋದ್ ಪೌಲ್

**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ಪಟ್ಟಣದ ಲಯೋಲ ಕಾಲೇಜನಲ್ಲಿ ಸ್ನಾತಕೋತ್ತರ ಪದವಿಯ ಕಲಾ ವಿಭಾಗದ ನಾಲ್ಕನೇ ಮತ್ತು ಆರನೇ ಸೆಮಿಸ್ಟರ್ ವಿದ್ಯಾರ್ಥಿಗಳಿಂದ ಏರ್ಪಡಿಸಲಾದ ಪ್ರಾಯೋಗಿಕ ಕಾರ್ಯ ಮತ್ತು ಕ್ಷೇತ್ರ ಅಧ್ಯಯನ ವಿಷಯಗಳ ಪ್ರಸ್ತುತಿ ಕಾರ್ಯಾಗಾರವನ್ನು ಉದ್ಘಾಟಿಸಿ ಕಾಲೇಜಿನ ಪ್ರಾಂಶುಪಾಲರಾದ ಈಡಿ.**

Vinod Paul ಮಾತನಾಡಿ, ಸಂತ್ ಇಗ್ನೇಶಿಯಸ್ ಲೊಯೋಲ ಅವರ ಬೋಧನಾ ಕ್ರಮಗಳಾದ ಸಂದರ್ಭ, ಅನುಭವ, ಚಿಂತನೆ, ಕಾರ್ಯೋನ್ಮುಖ ಹಾಗೂ ಮೌಲ್ಯಮಾಪನಗಳ ಸಮ್ಮಿಲನವು ಗುಣಮಟ್ಟದ ಶಿಕ್ಷಣಕ್ಕೆ ಭದ್ರ ಬುನಾದಿಯಾಗಿದೆ ಎಂದು ಹೇಳಿದರು. ವಿದ್ಯಾರ್ಥಿಗಳಲ್ಲಿ ಆಂತರಿಕ ಪರಿವರ್ತನೆಯನ್ನು ತಂದು ಅವರನ್ನು ಸಮಾಜಮುಖಿ ಆಲೋಚನೆಯುಳ್ಳ ಉತ್ತಮ ನಾಯಕರನ್ನಾಗಿ



ರೂಪಿಸುವುದೇ ಲೊಯೋಲ ಶಿಕ್ಷಣ ಸಂಸ್ಥೆಗಳ ಮುಖ್ಯ ಉದ್ದೇಶವಾಗಿದೆ. ವಿದ್ಯಾರ್ಥಿಗಳು ಕೇವಲ ಬದಲಾವಣೆಯನ್ನು ಬಯಸುವವರಾಗದೆ, ತಾವೇ ಮುಂಚೂಣಿಯಲ್ಲಿ ನಿಂತು ಸಮಾಜವನ್ನು ಮುನ್ನಡೆಸುವ ಬದಲಾವಣೆಯ ನಾಯಕರಾಗಬೇಕು ಎಂದು ತಿಳಿಸಿದರು. ಮಾನ್ವಿಯ Government First Grade College Manviಯ ಸಹಾಯಕ ಪ್ರಾಧ್ಯಾಪಕರಾದ ಆಡಿ. Syed Mujeeb Ahmed ಮಾತನಾಡಿ,

ವಿದ್ಯಾರ್ಥಿಗಳು ಕೇವಲ ಪುಸ್ತಕದ ಜ್ಞಾನಕ್ಕೆ ಸೀಮಿತವಾಗದೆ ಹೊಸ ಆಲೋಚನೆಗಳನ್ನು ಹುಟ್ಟುಹಾಕುವ ಮತ್ತು ಸತ್ಯವನ್ನು ಅನ್ವೇಷಿಸುವ ಸಂಶೋಧನಾ ಪ್ರವೃತ್ತಿಯತ್ತ ಮುಖ ಮಾಡಬೇಕು ಎಂದು ಹೇಳಿದರು. ಶಿಸ್ತು, ಸಂಯಮ ಹಾಗೂ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡು ಸಂಶೋಧನಾತ್ಮಕ ದೃಷ್ಟಿಕೋನವನ್ನು ಬೆಳೆಸಿಕೊಂಡಾಗ ಮಾತ್ರ ಆರೋಗ್ಯವಂತ ಮತ್ತು ಪ್ರಗತಿಪರ ಸಮಾಜ ನಿರ್ಮಾಣ ಸಾಧ್ಯವಾಗಲಿದೆ ಎಂದು ತಿಳಿಸಿದರು.

ಸಹಾಯಕ ಪ್ರಾಧ್ಯಾಪಕರಾದ Chandru N Hosur ಮಾತನಾಡಿ, ಯಾವುದೇ ಸಂಶೋಧನೆಯು ಜ್ಞಾನದ ಜೊತೆಗೆ ಜೀವನದ ಮೌಲ್ಯಗಳನ್ನು ಕಲಿಸುತ್ತದೆ. ಕಠಿಣ ಪರಿಸ್ಥಿತಿಗಳನ್ನು ಎದುರಿಸಿ ಸವಾಲುಗಳನ್ನು ಮೆಟ್ಟಿ ನಿಂತಾಗ ಮಾತ್ರ ಉನ್ನತ ಫಲಿತಾಂಶ ಸಾಧಿಸಲು ಸಾಧ್ಯ ಎಂದು ಹೇಳಿದರು. ಮತ್ತೋರ್ವ ಸಹಾಯಕ ಪ್ರಾಧ್ಯಾಪಕರಾದ ಆಡಿ. Basavaraj Sunkeshwar ಮಾತನಾಡಿ, ಕ್ಷೇತ್ರ ಅಧ್ಯಯನ ಮತ್ತು ಪ್ರಾಯೋಗಿಕ ಕಾರ್ಯಗಳು ವಿದ್ಯಾರ್ಥಿಗಳಿಗೆ ನೈಜ ಜಗತ್ತಿನ ಅನುಭವವನ್ನು ನೀಡುತ್ತವೆ.

ಶಿಸ್ತುಬದ್ಧ ಜೀವನ ಹಾಗೂ ಸಂಯಮವು ನಾಯಕತ್ವ ಗುಣವನ್ನು ಹೆಚ್ಚಿಸಿ ಉತ್ತಮ ನಾಗರಿಕನ ನಿರ್ಮಾಣಕ್ಕೆ ಸಹಕಾರಿಯಾಗುತ್ತದೆ ಎಂದು ಹೇಳಿದರು. ಶ್ರೀ ವೆಂಕಟೇಶ್ವರ ಪದವಿ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಆಡಿ. Huliyappa Dumati ಮಾತನಾಡಿ, ಕ್ಷೇತ್ರ ಅಧ್ಯಯನವು ವಿದ್ಯಾರ್ಥಿಗಳಲ್ಲಿ ಸಂಶೋಧನಾ ಪ್ರವೃತ್ತಿ, ದತ್ತಾಂಶ ಸಂಗ್ರಹಣೆ ಹಾಗೂ ವಿಶ್ಲೇಷಣಾ ಸಾಮರ್ಥ್ಯವನ್ನು ವೃದ್ಧಿಸುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಉಪಪ್ರಾಚಾರ್ಯರಾದ ಖಾಸಿಂಸಾಬ್, ಕಲಾ ವಿಭಾಗದ ಮುಖ್ಯಸ್ಥರಾದ ದೇವಣ್ಣ, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ನೇಮಕಾತಿ ಪ್ರಕಟಣೆ

KSP ನೇಮಕಾತಿ 2026–41 ಎಂಜಿನ್ ಚಾಲಕ (ಹೆಡ್ ಕಾನ್ಸ್‌ಟೇಬಲ್ ಗ್ರೇಡ್) ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಮೇ 19, 2026 ಏಖಕ ನೇಮಕಾತಿ 2026: 41 ಎಂಜಿನ್ ಚಾಲಕ (ಹೆಡ್ ಕಾನ್ಸ್‌ಟೇಬಲ್ ಗ್ರೇಡ್) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ (ಭಾರತ ಗೃಹ ಸಚಿವಾಲಯವು ಕರ್ನಾಟಕದ ಕೋಸ್ಟಲ್ ಸೆಕ್ಯುರಿಟಿ ಸ್ಕೀಮ್ ಹಂತ–1 ರ ಅಡಿಯಲ್ಲಿ ಕೋಸ್ಟಲ್ ಸೆಕ್ಯುರಿಟಿ ಪೊಲೀಸ್ ಠಾಣೆಗಳಿಗೆ ಅನುಮತಿ ನೀಡಿದೆ) ಮೇ 2026 ರ KSP ಅಧಿಕೃತ ಅಧಿಸೂಚನೆಯ ಮೂಲಕ ಎಂಜಿನ್ ಚಾಲಕ (ಹೆಡ್ ಕಾನ್ಸ್‌ಟೇಬಲ್ ಗ್ರೇಡ್) ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಉಡುಪಿ, ಬೆಂಗಳೂರು ಕರ್ನಾಟಕ ಸರ್ಕಾರದಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 06–ಜೂನ್–2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. Official Website: ksp.karnataka.gov.in

# ಇರಾನ್–ಅಮೆರಿಕ ನಡುವೆ ಶಾಂತಿ ಒಪ್ಪಂದ ಅಂತಿಮ

**ನೈಜ್ಯ ದೆಸೆ ನ್ಯೂಸ್**

**ವಾಷಿಂಗ್ಟನ್/ತೆಹ್ರಾನ್: ಅಮೆರಿಕ ಮತ್ತು ಇರಾನ್ ನಡುವೆ ಕಳೆದ ಮೂರು ತಿಂಗಳಿನಿಂದ ನಡೆಯುತ್ತಿರುವ ಭೀಕರ ಯುದ್ಧಕ್ಕೆ ತೆರೆ ಎಳೆಯುವ ನಿಟ್ಟಿನಲ್ಲಿ ಪ್ರಮುಖ ಬೆಳವಣಿಗೆಯಾಗಿದೆ. ಉಭಯ ದೇಶಗಳ ನಡುವಿನ ಶಾಂತಿ ಒಪ್ಪಂದವು "ಬಹುತೇಕ ಅಂತಿಮ ಹಂತಕ್ಕೆ ತಲುಪಿದೆ" ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇಂದು ಘೋಷಿಸಿದ್ದಾರೆ.**



ತಮ್ಮ 'ಟ್ರುತ್ ಸೋಶಿಯಲ್' ಜಾಲತಾಣದಲ್ಲಿ ಈ ಕುರಿತು ಬರೆದುಕೊಂಡಿರುವ ಟ್ರಂಪ್, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಜೋರ್ಡಾನ್, ಯುಎಇ, ಈಜಿಪ್ಟ್ ಟರ್ಕಿ ಮತ್ತು ಪಾಕಿಸ್ತಾನದ ಮಿತ್ರರಾಷ್ಟ್ರಗಳೊಂದಿಗೆ ಸುದೀರ್ಘ ಚರ್ಚೆ ನಡೆಸಿದ ಬಳಿಕ ಈ ಒಪ್ಪಂದದ ಕರಡು ಸಿದ್ಧವಾಗಿದೆ ಎಂದು ತಿಳಿಸಿದ್ದಾರೆ. ಅಮೆರಿಕ, ಇರಾನ್ ಮತ್ತು ಇತರ ಪಾಲುದಾರ ರಾಷ್ಟ್ರಗಳ ನಡುವೆ ಶಾಂತಿಗೆ ಸಂಬಂಧಿಸಿದಂತೆ ತಿಳುವಳಿಕಾ ಪತ್ರ ಬಹುತೇಕ ಸಿದ್ಧಗೊಂಡಿದೆ. ಇಸ್ರೇಲ್ ಪ್ರಧಾನಿ ನೆತನ್ಯಾಹು ಅವರೊಂದಿಗೆ ನಡೆಸಿದ ದೂರವಾಣಿ ಸಂಭಾಷಣೆ ಯಶಸ್ವಿಯಾಗಿದೆ. ಒಪ್ಪಂದದ ಅಂತಿಮ ಹಂತದ ಚರ್ಚೆಗಳು ನಡೆಯುತ್ತಿದ್ದು, ಶೀಘ್ರದಲ್ಲೇ ಅಧಿಕೃತ ಘೋಷಣೆ ಹೊರಬೀಳಲಿದೆ. ವಿಶ್ವದ ಪ್ರಮುಖ ತೈಲ ಸಾಗಣೆಯ ಮಾರ್ಗವಾಗಿರುವ ಹೊರ್ಮುಜ್ ಜಲಸಂಧಿಯನ್ನು ಈ ಒಪ್ಪಂದದ ಭಾಗವಾಗಿ ಮತ್ತೆ ಸಂಚಾರ ಮುಕ್ತಗೊಳಿಸಲಾಗುವುದು ಎಂದು ಟ್ರಂಪ್ ಹೇಳಿದ್ದಾರೆ. ಆದರೆ ಇರಾನ್ ಇದನ್ನು ತಕ್ಷಣವೇ ನಿರಾಕರಿಸಿದೆ. ಜಲಸಂಧಿಯ ಮೇಲಿನ ಸಂಪೂರ್ಣ ನಿಯಂತ್ರಣ ಇರಾನ್ ಬಳಿಯೇ ಇರಲಿದ್ದು, ಯುದ್ಧಕ್ಕೂ ಮುನ್ನ ಇದ್ದಷ್ಟು ಹಡಗುಗಳ ಸಂಚಾರಕ್ಕೆ ಮಾತ್ರ ತಾನು ಅವಕಾಶ ನೀಡುವುದಾಗಿ ಇರಾನ್ ಸ್ಪಷ್ಟಪಡಿಸಿದೆ. ಇದು ಯಾವುದೇ ಕಾರಣಕ್ಕೂ 'ಮುಕ್ತ ಸಂಚಾರ' ಅಲ್ಲ ಎಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ. ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮೇಲ್ ಬಘೇಯ್ ಮಾತನಾಡಿ, "ಸದ್ಯಕ್ಕೆ ಯುದ್ಧ ನಿಲ್ಲಿಸುವುದು ನಮ್ಮ ಮೊದಲ ಆದ್ಯತೆಯಾಗಿದೆ. ನಾವು 14 ವಿಧಿಗಳನ್ನು ಒಳಗೊಂಡ ತಿಳುವಳಿಕಾ ಪತ್ರದ ಬಗ್ಗೆ ಚರ್ಚಿಸುತ್ತಿದ್ದೇವೆ. ಲೆಬನಾನ್ ಸೇರಿದಂತೆ ಎಲ್ಲಾ ರಂಗಗಳಲ್ಲಿ ಯುದ್ಧ ನಿಲ್ಲಿಸುವುದು, ಅಮೆರಿಕದ ನೌಕಾ ದಿಗ್ಬಂಧನವನ್ನು ಹಿಂಪಡೆಯುವುದು ಮತ್ತು ಜಪ್ತಿ ಮಾಡಲಾಗಿರುವ ಇರಾನ್‌ನ ಆಸ್ತಿಯನ್ನು ಮುಕ್ತಗೊಳಿಸುವುದು ನಮ್ಮ ಮುಖ್ಯ ಬೇಡಿಕೆಗಳಾಗಿವೆ" ಎಂದಿದ್ದಾರೆ. ಪರಮಾಣು ಒಪ್ಪಂದದ ಬಗ್ಗೆ ಮೌನವಿಶೇಷವೆಂದರೆ, ಇರಾನ್‌ನ ಪರಮಾಣು ಕಾರ್ಯಕ್ರಮದ ಬಗ್ಗೆ ಈ ಒಪ್ಪಂದದಲ್ಲಿ ಯಾವುದೇ ಪ್ರಸ್ತಾಪವಾಗಿಲ್ಲ. ಇರಾನ್‌ನ ಕ್ರಾಂತಿಕಾರಿ ಗಾರ್ಡ್ಸ್ ಟ್ರಂಪ್ ಅವರ ಪೋಸ್ಟ್ ಅನ್ನು ಕೇವಲ "ಪ್ರಚಾರದ ತಂತ್ರ" ಎಂದು ಕರೆದಿದ್ದು, ಪರಮಾಣು ವಿಷಯದ ಬಗ್ಗೆ ನಾವು ಯಾವುದೇ ಬದ್ಧತೆ ಪ್ರದರ್ಶಿಸಿಲ್ಲ ಎಂದು ಸ್ಪಷ್ಟಪಡಿಸಿದೆ. ಮಧ್ಯಸ್ಥಿಕೆಗೆ ಪಾಕಿಸ್ತಾನ ಉತ್ಸುಕಈ ಮಧ್ಯೆ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಅವರು ಶಾಂತಿ ಪ್ರಕ್ರಿಯೆಯನ್ನು ಸ್ವಾಗತಿಸಿದ್ದು, ಅಮೆರಿಕ ಮತ್ತು ಇರಾನ್ ನಡುವಿನ ಮುಂದಿನ ಸುತ್ತಿನ ಶಾಂತಿ ಮಾತುಕತೆಗೆ ಆತಿಥ್ಯ ವಹಿಸಲು ಪಾಕಿಸ್ತಾನ ಸಿದ್ಧವಿದೆ ಎಂದು ತಿಳಿಸಿದ್ದಾರೆ. ಪಾಕ್ ಸೇನಾ ಮುಖ್ಯಸ್ಥ ಅಸಿಮ್ ಮುನೀರ್ ಅವರು ಈಗಾಗಲೇ ಟ್ರಂಪ್ ಅವರೊಂದಿಗೆ ಈ ಕುರಿತು ಚರ್ಚೆ ನಡೆಸಿದ್ದಾರೆ ಎನ್ನಲಾಗಿದೆ.

# ಕ್ರೀಡಾ ವಸತಿ ನಿಯಲಗಳಿಗೆ ಜೂನ್ 01ರಂದು ವಿಶೇಷ ಆಯ್ಕೆ ಶಿಬಿರ

**ನೈಜ್ಯ ದೆಸೆ ನ್ಯೂಸ್**



**ರಾಯಚೂರು: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ 2026–27ನೇ ಸಾಲಿನಲ್ಲಿ ಕ್ರೀಡಾ ವಸತಿ ಶಾಲೆ ಅಥವಾ ನಿಲಯಗಳಿಗೆ 8ನೇ ತರಗತಿ ಮತ್ತು ಪ್ರಥಮ ಪಿ.ಯು.ಸಿ ಮಟ್ಟದ ಅರ್ಹ ಕ್ರೀಡಾಪಟುಗಳನ್ನು ಆಯ್ಕೆ ಮಾಡಿ ಪ್ರವೇಶಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಈಗಾಗಲೇ ಜಿಲ್ಲಾ ಹಾಗೂ ವಿಭಾಗ ಮಟ್ಟದಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಗಿದ್ದು,**

ಈ ಆಯ್ಕೆ ಶಿಬಿರಗಳನ್ನು ವಿವಿಧ ಕಾರಣಗಳಿಂದ ಭಾಗವಹಿಸಲು ಸಾದ್ಯವಾಗದ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶವನ್ನು ನೀಡುವ ದೃಷ್ಟಿಯಿಂದ ಜೂನ್ 01ರಂದು ರಾಜ್ಯದ ಕೆಲವು ಸ್ಥಳಗಳಲ್ಲಿ ವಿವಿಧ ಕ್ರೀಡೆಗಳಿಗೆ ವಿಶೇಷ ಆಯ್ಕೆ ಶಿಬಿರಗಳನ್ನು ಆಯೋಜಿಸಲು ಉದ್ದೇಶಿಸಲಾಗಿದೆ. ಕಿರಿಯರ ವಿಭಾಗದ ಕ್ರೀಡಾ ವಸತಿ ಶಾಲೆಗಳ ಆಯ್ಕೆಯನ್ನು ಪ್ರಸ್ತುತ 7ನೇ ತರಗತಿ ಅಭ್ಯಾಸ ಮಾಡುತ್ತಿರುವ ಬಾಲಕ/ಬಾಲಕಿಯರಿಗಾಗಿ ದಿನಾಂಕ 01–06–2026 ರಂದು 14 ವರ್ಷದೊಳಗಿರಬೇಕು ಮತ್ತು 8ನೇ ತರಗತಿಗೆ ಪ್ರವೇಶ ಪಡೆಯಲು ಅರ್ಹರಾಗಿರಬೇಕು.

ಹಿರಿಯರ ವಿಭಾಗದ ಕ್ರೀಡಾ ವಸತಿ ಶಾಲೆಗಳ ಆಯ್ಕೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳು ದಿನಾಂಕ 01–06–2026 ರಂದು 18 ವರ್ಷದೊಳಗಿದ್ದು, ಪ್ರಥಮ ಪಿ.ಯು.ಸಿ ಪ್ರವೇಶ ಪಡೆಯಲು ಅರ್ಹರಿರಬೇಕು. ಆಯ್ಕೆಯನ್ನು ಪ್ರಸ್ತುತ 10ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಬಾಲಕ ಅಥವಾ ಬಾಲಕಿಯರಿಗಾಗಿ ಆಯ್ಕೆ ನಡೆಸಲಾಗುತ್ತಿದೆ. ತಾವು ವ್ಯಾಸಾಂಗ ಮಾಡುತ್ತಿರುವ ಶಾಲಾ ಮುಖ್ಯಸ್ಥರಿಂದ ಜನ್ಮ ದಿನಾಂಕ ಪ್ರಮಾಣಪತ್ರ ಹಾಗೂ ವ್ಯಾಸಂಗ ಮಾಡುತ್ತಿರುವ ತರಗತಿಯ ವಿವರಗಳನ್ನೊಳಗೊಂಡ ದೃಢೀಕರಣ ಪತ್ರವನ್ನು ಆಯ್ಕೆ ದಿನದಂದು ಕಡ್ಡಾಯವಾಗಿ ತರಬೇಕು.

ಆಸಕ್ತ ಕ್ರೀಡಾಪಟುಗಳು ಈ ವಿಶೇಷ ಆಯ್ಕೆ ಶಿಬಿರದಲ್ಲಿ ಭಾಗವಹಿಸಬಹುದಾಗಿದೆ. ರಾಜ್ಯದ ಯಾವುದೇ ಭಾಗದ ಕ್ರೀಡಾಪಟಗಳು ಭಾಗವಹಿಸಲು ಮುಕ್ತ ಅವಕಾಶವಿರುತ್ತದೆ. ಆಯ್ಕೆಯಲ್ಲಿ ಪಾಲ್ಗೊಳ್ಳುವ ಕ್ರೀಡಾಪಟುಗಳಿಗೆ ಯಾವುದೇ ವಿಧವಾದ ಭತ್ಯೆಯನ್ನು ನೀಡಲಾಗುವುದಿಲ್ಲ. ಹೆಚ್ಚಿನ ವಿವರಗಳಿಗೆ ಸಹಾಯಕ ನಿರ್ದೇಶಕರ ಕಚೇರಿ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣ ರಾಯಚೂರು ಇಲ್ಲಿ ಅಥವಾ ಖೇಲೋ ಇಂಡಿಯಾ ತರಬೇತುದಾರರು ಚಂದ್ರಶೇಖರ್ ದೂರವಾಣಿ ಸಂಖ್ಯೆ: 9886551214ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕುರ್ಬಾನಿ ಹೆಸರಿನಲ್ಲಿ ಗೋಹತ್ಯ ತಡೆಯಲು ಆಗ್ರಹ ತಾಲೂಕಿನಲ್ಲಿ ವಿಶೇಷ ಗಸ್ತು ಹಾಗೂ ಚೆಕ್‌ಪೋಸ್ಟ್ ಸ್ಥಾಪನೆಗೆ ಮನವಿ



**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ಪಟ್ಟಣದ ಪೊಲೀಸ್ ಠಾಣೆಯಲ್ಲಿ ವಿಶ್ವಹಿಂದೂ ಪರಿಷತ್, ಬಜರಂಗದಳ ಹಾಗೂ ಗೋ ರಕ್ಷಾ ವಿಭಾಗದ ವತಿಯಿಂದ ಮಾನ್ವಿ ಪೊಲೀಸ್ ಠಾಣೆಯ ಪಿ.ಐ. ಸೋಮಶೇಖರ ಎಸ್. ಕೆಂಚರೆಡ್ಡಿ ಅವರಿಗೆ ವಿಶ್ವಹಿಂದೂ ಪರಿಷತ್ ತಾಲೂಕು ಅಧ್ಯಕ್ಷ ವಿಜಯಕುಮಾರ ಇಭ್ರಮಾಪುರ್ ಮನವಿ ಸಲ್ಲಿಸಿ ಮಾತನಾಡಿ, ರಾಜ್ಯದಲ್ಲಿ ಗೋವಂಶವನ್ನು ರಕ್ಷಿಸುವ ಉದ್ದೇಶದಿಂದ ದನ, ಹೋರಿ, ಕರು ಹಾಗೂ 13 ವರ್ಷದೊಳಗಿನ ಎಮ್ಮೆ ಮತ್ತು ಕೋಣಗಳ ಹತ್ಯೆ, ಹಿಂಸೆ ಹಾಗೂ ಬಲಿಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.**

ಈ ಕಾನೂನನ್ನು ಉಲ್ಲಂಘಿಸಿದರೆ ಶಿಕ್ಷಾರ್ಹ ಅಪರಾಧವಾಗುವುದರಿಂದ, ಪೊಲೀಸ್ ಇಲಾಖೆ ತಾಲೂಕಿನಲ್ಲಿ ಕುರ್ಬಾನಿ ಹೆಸರಿನಲ್ಲಿ ನಡೆಯುವ ಗೋಹತ್ಯೆಯನ್ನು ತಡೆಯಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಮೇ 28ರವರೆಗೆ ತಾಲೂಕಿನಾದ್ಯಂತ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿ ಗೋಸಾಗಣೆ ನಡೆಯದಂತೆ ತಡೆಯಬೇಕು. ಗ್ರಾಮೀಣ ಭಾಗಗಳಲ್ಲಿ ಗೋ ಕಳ್ಳತನವಾಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ಬಕ್ರೀದ್ ಹಬ್ಬದ ಹಿನ್ನೆಲೆ ಕುರ್ಬಾನಿ ತಡೆಯಲು ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ವಿಶೇಷ ತಂಡಗಳನ್ನು ರಚಿಸಬೇಕು ಎಂದು ಮನವಿಯಲ್ಲಿ ತಿಳಿಸಿದರು.

ಇದೇ ವೇಳೆ ರಾಣೆಬೆನ್ನೂರು ನಗರದಲ್ಲಿ ಗೋಹತ್ಯೆ ತಡೆಗೆ ಪೊಲೀಸ್ ಇಲಾಖೆಗೆ ಮಾಹಿತಿ ನೀಡಿದ್ದ ಬಜರಂಗದಳ ಕಾರ್ಯಕರ್ತನ ಮೇಲೆ 30ಕ್ಕೂ ಹೆಚ್ಚು ಅನ್ಯಕೋಮಿನ ಜನರು ಹಲ್ಲೆ ನಡೆಸಿರುವ ಘಟನೆ ಖಂಡಿಸಿ, ಆರೋಪಿಗಳನ್ನು ಕೂಡಲೇ ಬಂಧಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಗ್ರಾಮಗಳಲ್ಲಿ ಗೋರಕ್ಷಕ ದಳಗಳನ್ನು ರಚಿಸಬೇಕು ಎಂದು ಆಗ್ರಹಿಸಿದರು. ವಿ.ಹೆಚ್.ಪಿ ತಾಲೂಕು ಕಾರ್ಯದರ್ಶಿ ನಾಗಭೂಷಣ, ಬಜರಂಗದಳ ವಿಭಾಗೀಯ ಸಂಯೋಜಕ ರವಿಕುಮಾರ, ತಾಲೂಕು ಸಂಯೋಜಕ ಕೃಷ್ಣದೊರೆ, ಜೆ. ಸುಧಾಕರ್, ಆರ್. ಮುತ್ತುರಾಜ್ ಶೆಟ್ಟಿ, ಸುರೇಶ ನಾಡಗೌಡ, ಮಾರುತಿನಾಯಕ, ಈರಣ್ಣ ಶೆಟ್ಟಿ, ವಿನೋದಕುಮಾರ, ಸಂಗಮೇಶ ಗೌಡ, ಕುಮಾರ ಮೇದಾ, ಬಸವರಾಜ ಶೆಟ್ಟಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಭೂಮನಗುಂಡ ಸಿಡಿಲು ಬಡಿದು ಶೇಂಗಾ ಹೊಟ್ಟು ಬಣವೆಗಳು ಭಸ್ಮ : ಶಾಸಕಿ ಕರೆಮ್ಮ ಜಿ.ನಾಯಕ ಬೇಟಿ

**ನೈಜ್ಯ ದೆಸೆ ನ್ಯೂಸ್**

**ಅರಕೇರಾ: ತಾಲೂಕಿನ ಭೂಮನಗುಂಡ ಗ್ರಾಮದ ಹೋರವಲಯದಲ್ಲಿನ ತಾಯಮ್ಮದೊಡ್ಡಿ( ಕುರ್ಲೆರದೊಡ್ಡಿ)ಯಲ್ಲಿ ಹೊಲದಲ್ಲಿದ್ದ ಮೇವಿನ ಬಣವೆಗೆ ಶನಿವಾರ ರಾತ್ರಿ ಸಿಡಿಲು ಬಡಿದು ಮೇವಿನ ಬಣವೆಗಳಿಗೆ ಬೆಂಕಿ ಬಿದ್ದು 5 ಬಣವೆಗಳು ಬೆಂಕಿಗೆ ಆಹುತಿಯಾಗಿರುವ ಘಟನೆ ಜರುಗಿದೆ.**

ಸುದ್ದಿ ತಿಳಿದ ದೇವದುರ್ಗ ವಿಧಾನ ಸಭಾ ಕ್ಷೇತ್ರದ ಶಾಸಕಿ ಕರೆಮ್ಮ ಜಿ.ನಾಯಕ ಅವರು ಸೋಮವಾರ ಸ್ಥಳಕ್ಕೆ ಭೇಟಿ ನೀಡಿ ಹಾನಿಯಾದ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು.ಜಾನುವಾರುಗಳಿಗೆ ಸಂಗ್ರಹಿಸಿದ ಭತ್ತದ ಮೇವು,ಶೇಂಗಾ ಹೊಟ್ಟು,ಹಾಗೂ ಜೋಳದ ಸೊಪ್ಪೆಯ ಬಣವೆಗಳು ಸುಟ್ಟು ಭಸ್ಮವಾಗಿವೆ.



ಐದಾರು ಲಕ್ಷರೂಪಾಯಿಗಳಷ್ಟು ನಷ್ಟ ಸಂಭವಿಸಿದೆ ಎಂದು ಹತಾಶೆಗೊಂಡ ರೈತರು ಶಾಸಕರ ಮುಂದೆ ತಮ್ಮ ಆಳಲನ್ನು ತೊಡಿಕೊಂಡರು.ನೊಂದ ರೈತರಿಗೆ ಶಾಸಕರು ವೈಯಕ್ತಿಕವಾಗಿ 25 ಸಾವಿರ ರೂಪಾಯಿ ನಗದು ಹಣ ನೀಡಿ ಸಾಂತ್ವನ ಹೇಳೀದರು.

ಸರಕಾರದಿಂದ ಸಿಗುವ ಪರಿಹಾರವನ್ನು ಕೊಡಿಸುವ ಭರವಸೆ ನೀಡಿದರು. ಈ ವೇಳೆ ತಹಶೀಲ್ದಾರ ಅಮರೇಶ ಬಿರಾದಾರ,ತಾಪಂ ಇಒ ಯಮನಪ್ಪ ವಾಲ್ಮೀಕಿ ಸಿಡಿಪಿಒ ಕಟ್ಟೆಪ್ಪ, ಕಂದಾಯ ನೀರಿಕ್ಷಕ ಅನಿಲ್ ಹಾಗೂ ಮುಖಂಡರಾದ ತಿಮ್ಮರಡ್ಡಿ ಚಿಂತಲಕುಂಟ,ಸಿದ್ದಣ್ಣದೊಡಂಬಳಿ, ಹನುಮಯ್ಯನಾಯಕ ಅರಳೆಬಂಡಿ, ಗೋವಿಂದರಾಜನಾಯಕ ಚಿಕ್ಕಗುಡ್ಡ,ಚನ್ನಪ್ಪಗೌಡ,ಕುಪ್ಪಯ್ಯ ಆಲ್ಕೋಡ,ಉಮೇಶಗೌಡ,ಆಮಜನೇಯ್ಯ ನಗಡದಿನ್ನಿ,ವೆಂಕಟೇಶಗೌಡ,ಮಹಾದೇವ ಬಿಚ್ಚದ ಅರಕೇರಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಮಾನ್ವಿ–ಹುಮನಬಾದ ಮಧ್ಯೆ ಬಸ್ ಸಂಚಾರ ಆರಂಭ



**ನೈಜ್ಯ ದೆಸೆ ನ್ಯೂಸ್**

**ಅರಕೇರಾ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ರಾಯಚೂರು ವಿಭಾಗ ಮಾನ್ವಿ ಘಟಕದಿಂದ ಮಾನ್ವಿ– ಸಿರವಾರ–ಅರಕೇರಾ ದೇವದುರ್ಗ ಶಹಾಪೂರು ಜೇವರ್ಗಿ ಕಲಬುರ್ಗಿ ಕಮಲಪೂರು ಹುಮನಬಾದ ನೂತನ ಬಸ್ ಸಂಚಾರ ಆರಂಭವಾಗಿದೆ.**

ಮಾನ್ವಿ–ಹುಮನಬಾದ ಮಾರ್ಗ ಸಂಖ್ಯೆ 46–47 ಇದ್ದು ಈ ಬಸ್ ಮಾನ್ವಿಯಿಂದ ಬೆಳಿಗ್ಗೆ 10.30 ನಿಮಿಷಕ್ಕೆ ಬಿಟ್ಟು ಮಾರ್ಗ ಸಿರವಾರ,ಅರಕೇರಾ,ದೇವದುರ್ಗ,ಶಹಾಪೂರು,ಜೇವರ್ಗಿ ಕಲಬುರ್ಗಿ ಕಮಲಪೂರು ಹುಮನಬಾದಕ್ಕೆ ಸಂಜೆ 6 ಗಂಟೆಗೆ ತಲುಪಲಿದೆ. ಹುಮನಬಾದ ಬಸ್ ನಿಲ್ದಾಣದಿಂದ ಬೆಳಿಗ್ಗೆ 8.30 ನಿಮಿಷಕ್ಕೆ ಬಿಟ್ಟು ಅದೇ ಮಾರ್ಗದಿಂದ ಸಂಜೆ 4ಗಂಟೆಗೆ ಮಾನ್ವಿಗೆ ತಲುಪುವದು. ಇಂದು ಅರಕೇರಾ ಪಟ್ಟಣದಲ್ಲಿನ ಮಾನ್ವಿ ಇಂದ ಹುಮನಬಾದ ಬಸ್ಸಿಗೆ ಬಸ್ಸನಿಲ್ದಾಣದಲ್ಲಿ ನಾಗಯ್ಯಸ್ವಾಮಿ ಮಠಪತಿ ಪೂಜೆ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ವಾಹನ ಚಾಲಕ ಶ್ರೀಮಂತ ಮತ್ತು ನಿರ್ವಾಹಕರಾದ ಸೈಯದ್ ರಫೀಕ್ ಪಾಟೀಲ್ ಹಾಗೂ ಬಸ್ಸ ನಿಲ್ದಾಣದ ಸಂಚಾರಿ ಅಧಿಕಾರಿ ಶೇಖರಪ್ಪ ಎಸ್ ಗುಡಿ ಯವರಿಗೂ ಗ್ರಾಮಸ್ಥರು ಸನ್ಮಾನಿಸಿ ಗೌರವಿಸಿದರು.

ಮಾನ್ವಿ – ಹುಮನಬಾದ ಬಸ್ ಸಂಚಾರದಿಂದ ಈಭಾಗದ ಪ್ರಯಾಣಿಕರಿಗೆ ಹೆಚ್ಚಿನ ಅನೂಕೂಲವಾಗಲಿದೆ ಸಂದರ್ಭದಲ್ಲಿಡಾ.ರಾಘವೇಂದ್ರವಡಿಗೇರಾ,ಚಂದ್ರಶೇಖರನಾಯಕಬದ್ರಿ,ಕೆ.ಹೊಳೆಪ್ಪ,ಶಿವಗೇನುಗುಜಪ್ಪ,ವಿರೇಶಬೇರಿ, ವೆಂಕೋಬನಾಯಕ ಹೇಮನೂರು ರೈಮಾನಸಾಬ ಖಾಜಿ, ಸಾಬಣ್ಣ ಖಾನಾಪೂರು, ಅಮರೇಶ ಬಳೆಗೇರಾ, ಸಂತೋಷಮಾದ್ವರ, ನಾಗರಾಜಕುರುಕುಂದಿ, ಕರಿಯಪ್ಪ ಡ್ರೈವರ,ಸಲಿಂಖಾಜಿ, ಮಕ್ತಂ ಹುಸೇನ ಡಕಣಿ ಮುಂತಾದವರು ಉಪಸ್ಥಿತರಿದ್ದರು.

# ಹಳ್ಳಿಗಳಲ್ಲಿ ತಪ್ಪದ ಕುಡಿಯುವ ನೀರಿನ ಗೋಳು" 85 ಗ್ರಾಮಗಳಲ್ಲಿ ಖಾಸಗಿ ಕೊಳವೆಬಾವಿ ಬಾಡಿಗೆ ಪಡೆದು ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ.

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಕುಡಿಯುವ ನೀರಿನ ಉದ್ದೇಶಕ್ಕಾಗಿಯೇ 10 ವರ್ಷಗಳ ಹಿಂದೆ ಅನುಷ್ಠಾನಗೊಳಿಸಿದ ಹಲವು ಯೋಜನೆಗಳು ಇಂದಿಗೂ ಪೂರ್ಣಗೊಂಡಿಲ್ಲ. ಜಲಜೀವನ ಮಿಷನ್ ಯೋಜನೆ ನೆಲಕಚ್ಚಿದೆ. ಕಳಪೆ ಕಾಮಗಾರಿಯಿಂದಾಗಿ ಓವರ್‌ಹೆಡ್ ಟ್ಯಾಂಕ್‌ಗಳು ಉದ್ಘಾಟನೆಗೆ ಮುನ್ನವೇ ಹಾಳಾಗಿವೆ. ನದಿ ಪಕ್ಕದಲ್ಲಿ ಕೆರೆ ನಿರ್ಮಿಸಿದರೂ ಅದನ್ನು ತುಂಬಿಸಿಲ್ಲ. ಶುದ್ಧ ನೀರಿನ ಘಟಕಗಳು ಕೆಟ್ಟು ನಿಂತು ಹಲವು ವರ್ಷಗಳಾಗಿವೆ.**

ಕವಿತಾಳ ಸುತ್ತಮುತ್ತಲಿನ ಹಳ್ಳಿಗಳಲ್ಲಿ ನೀರಿನ ತೊಟ್ಟಿಯಿಂದ ತಳ್ಳುಬಂಡಿಯಲ್ಲಿ ಕೊಡಗಳಲ್ಲಿ ನೀರು ಒಯ್ಯುತ್ತಿರುವುದು ಅನಿವಾರ್ಯವಾಗಿದೆ. ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮೂಲಕ 381.64 ಕೋಟಿ ವೆಚ್ಚದಲ್ಲಿ 1,210 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇದರಲ್ಲಿ 1,087 ಕಾಮಗಾರಿಗಳು ಪೂರ್ಣಗೊಂಡಿವೆ. 122 ಕಾಮಗಾರಿಗಳು ಇನ್ನೂ ಪೂರ್ಣಗೊಂಡಿಲ್ಲ. ಜಲಜೀವನ ಮಿಷನ್ ಯೋಜನೆ ಅಡಿ ಜಿಲ್ಲೆಯ ಎಲ್ಲ ಗ್ರಾಮೀಣ ವಸತಿ ಪ್ರದೇಶಗಳು ಹಾಗೂ 7 ನಗರ ಸ್ಥಳೀಯ ಸಂಸ್ಥೆಗಳಾದ ಮಾನ್ವಿ, ಮಸ್ಕಿ, ಕವಿತಾಳ, ತುರ್ವಿಹಾಳ, ಬಳಗಾನೂರು, ಸಿರವಾರ ಹಾಗೂ ಹಟ್ಟಿ ಒಳಗೊಂಡು ಬಹು ಗ್ರಾಮ ಕುಡಿಯುವ ನೀರು ಸರಬರಾಜು



ಯೋಜನೆಯಡಿ ಕಾಮಗಾರಿ ನಡೆಯುತ್ತಿದೆ.

ಶಂಕರ ನಾರಾಯಣ ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್, ವೈಟಲ್ ಎನ್ವಿರಾನ್ಮೆಂಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಆ?ಯಂಡ್ ಎಸ್‌ಪಿಎಂಎಲ್ ಕಂಪನಿ ಕಾಮಗಾರಿಯ ಗುತ್ತಿಗೆ ಪಡೆದುಕೊಂಡಿದೆ. 2022ರ ಜೂನ್ 4ರಂದು ಕರಾರು ಮಾಡಿಕೊಳ್ಳಲಾಗಿದೆ. ಕರಾರಿನ ಪ್ರಕಾರ 2024ರ ಡಿಸೆಂಬರ್ ಮೊದಲ ವಾರದಲ್ಲೇ ಕಾಮಗಾರಿ ಮುಗಿಸಬೇಕಿತ್ತು. ಅವಧಿ ಮುಗಿದು ಎರಡು ವರ್ಷ ಕಳೆದರೂ ಕಾಮಗಾರಿ ತೆವಳುತ್ತ ಸಾಗಿದೆ. ಇದೀಗ ಯೋಜನಾ ವೆಚ್ಚ 2,978 ಕೋಟಿ ದಾಟಿದೆ.

ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು 2025ರ ಜುಲೈ 18ರಂದು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆಸಿದ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಶೇ 48.87ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಮಾಹಿತಿ ಒದಗಿಸಿದ್ದರು. 2026ರ ಫೆಬ್ರವರಿ 21ರಂದು ಸಂಸದ ಜಿ.ಕುಮಾರ ನಾಯಕ ನಡೆಸಿದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಂಡಿಸಿದ ವರದಿಯಲ್ಲಿ ಶೇ 53.35ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಲಿಖಿತ ಮಾಹಿತಿ ಒದಗಿಸಿದ್ದರು. ಆರು ತಿಂಗಳ ಅವಧಿಯಲ್ಲಿ ಶೇ 4.48 ರಷ್ಟು ಮಾತ್ರ ಪ್ರಗತಿ ಸಾಧಿಸಿರುವುದು ಅಂಕಿ–ಅಂಶಗಳೇ ಹೇಳುತ್ತಿವೆ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ವೈರ್‌ಮ್ಯಾನ್

ವೈರ್‌ಮ್ಯಾನ್ (Wireman) ಕೋರ್ಸ್‌ವು Craftsmen Training Scheme (CTS) ಅಡಿಯಲ್ಲಿ ನಡೆಸಲಾಗುವ ಪ್ರಮುಖ ತಾಂತ್ರಿಕ ತರಬೇತಿ ಕಾರ್ಯಕ್ರಮವಾಗಿದೆ. ದೇಶದಾದ್ಯಂತ ಇರುವ Industrial Training Institutes (ITI) ಗಳ ಮೂಲಕ ಈ ಕೋರ್ಸ್‌ನ್ನು ನೀಡಲಾಗುತ್ತದೆ. ವಿದ್ಯುತ್ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳು ಹೆಚ್ಚಿರುವುದರಿಂದ, ಈ ಕೋರ್ಸ್ ಯುವಕರಲ್ಲಿ ಹೆಚ್ಚಿನ ಜನಪ್ರಿಯತೆಯನ್ನು ಹೊಂದಿದೆ. ಈ ಕೋರ್ಸ್‌ವು ಎರಡು ವರ್ಷದ ಅವಧಿಯನ್ನು ಹೊಂದಿದ್ದು, ನಾಲ್ಕು ಸೆಮಿಸ್ಟರ್‌ಗಳಾಗಿ ವಿಭಜಿಸಲಾಗಿದೆ. ತರಬೇತಿಯಲ್ಲಿ ಸಿದ್ಧಾಂತ ಮತ್ತು ಪ್ರಾಯೋಗಿಕ ಶಿಕ್ಷಣಕ್ಕೆ ಸಮಾನ ಮಹತ್ವ ನೀಡಲಾಗುತ್ತದೆ. ವಿದ್ಯಾರ್ಥಿಗಳಿಗೆ ಗೃಹ, ವಾಣಿಜ್ಯ ಮತ್ತು ಕೈಗಾರಿಕಾ ವಿದ್ಯುತ್ ವ್ಯವಸ್ಥೆಗಳ ಕುರಿತು ಸಂಪೂರ್ಣ ಅರಿವು ನೀಡಲಾಗುತ್ತದೆ. ವಿದ್ಯುತ್ ವೈರಿಂಗ್ ವಿಧಾನಗಳು ಗೃಹ ಮತ್ತು ಕೈಗಾರಿಕಾ ವಿದ್ಯುತ್ ಸಂಪರ್ಕಗಳು ಮೋಟಾರ್‌ಗಳ ಜೋಡಣೆ ಮತ್ತು ನಿರ್ವಹಣೆ ಟ್ರಾನ್ಸ್‌ಫಾರ್ಮರ್ ಮೂಲಭೂತ ಜ್ಞಾನ ವಿದ್ಯುತ್ ಸುರಕ್ಷತಾ ಕ್ರಮಗಳು ಮೀಟರ್‌ಗಳು ಮತ್ತು ಪರೀಕ್ಷಾ ಉಪಕರಣಗಳ ಬಳಕೆ ಫ್ಯೂಸ್, MCB, ELCB ಮತ್ತು ಇತರ ರಕ್ಷಣಾ ಸಾಧನಗಳು ಸೌರ ವಿದ್ಯುತ್ ವ್ಯವಸ್ಥೆಗಳ ಪರಿಚಯ. ಉದ್ಯೋಗಾವಕಾಶಗಳು: ಕೋರ್ಸ್ ಪೂರ್ಣಗೊಂಡ ನಂತರ ವಿದ್ಯಾರ್ಥಿಗಳು ಕೆಳಗಿನ ಕ್ಷೇತ್ರಗಳಲ್ಲಿ ಉದ್ಯೋಗ ಪಡೆಯಬಹುದು: ವಿದ್ಯುತ್ ತಂತ್ರಜ್ಞ (Electrician/Wireman) ಕಟ್ಟಡ ವೈ-ರಿಂಗ್ ಕೆಲಸಗಳು ಕೈಗಾರಿಕಾ ಘಟಕಗಳು ವಿದ್ಯುತ್ ನಿರ್ವಹಣಾ ವಿಭಾಗಗಳು ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳು ಸ್ವಂತ ವಿದ್ಯುತ್ ಗುತ್ತಿಗೆ ಕೆಲಸ ಹೆಚ್ಚುವರಿಯಾಗಿ, ಅನುಭವ ಮತ್ತು ಪರವಾನಗಿ ಪಡೆದ ನಂತರ ಸ್ವಂತ ವ್ಯವಹಾರ ಆರಂಭಿಸುವ ಅವಕಾಶವೂ ಇದೆ. ವಿದ್ಯಾರ್ಹತೆ 10 ನೇ ತರಗತಿ..

## ಮೋದಿ ಸರ್ಕಾರ ಉರುಳಿಸಲು ರಾಹುಲ್ ಸಂಚು

ನೈಜ್ಯ ದೆಸೆ ನ್ಯೂಸ್

**ನವದೆಹಲಿ: ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ದೇಶದಲ್ಲಿ ಅರಾಜಕತೆ ಸೃಷ್ಟಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವನ್ನು ಪತನಗೊಳಿಸಲು ವ್ಯವಸ್ಥಿತ ಸಂಚು ರೂಪಿಸುತ್ತಿದ್ದಾರೆ ಎಂದು ಭಾರತೀಯ ಜನತಾ ಪಾರ್ಟಿ (ಬಿಜೆಪಿ) ಇಂದು ತೀವ್ರ ವಾಗ್ದಾಳಿ ನಡೆಸಿದೆ. ರಾಹುಲ್ ಗಾಂಧಿ ಅವರು ವಿದೇಶಿ ಶಕ್ತಿಗಳ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಆಡಳಿತಾರೂಢ ಬಿಜೆಪಿ ಗಂಭೀರವಾಗಿ ಆರೋಪಿಸಿದೆ.**



ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ಸಂಸದ ಹಾಗೂ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರ, "ಕಾಂಗ್ರೆಸ್ ಪಕ್ಷದ ಅಲ್ಪಸಂಖ್ಯಾತ ವಿಭಾಗದ ಸಲಹಾ ಸಮಿತಿ ಸಭೆಯಲ್ಲಿ ರಾಹುಲ್ ಗಾಂಧಿ ಅವರು, ಮೋದಿ ಸರ್ಕಾರವು ಒಂದು ವರ್ಷದೊಳಗೆ ಪತನಗೊಳ್ಳಲಿದೆ ಎಂದು ಭವಿಷ್ಯ ನುಡಿದಿದ್ದಾರೆ. ಅವರ ಈ ಹೇಳಿಕೆಯ ಬೆನ್ನಲ್ಲೇ ಕಾಂಗ್ರೆಸ್‌ನ ಅಸಲಿ ಆಜೆಂಡಾ ಬಹಿರಂಗವಾಗಿದೆ. ದೇಶದಲ್ಲಿ ದಂಗೆಗಳನ್ನು ಪ್ರಚೋದಿಸುವ ಮೂಲಕ ಮತ್ತು ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವ ಮೂಲಕ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಸರ್ಕಾರವನ್ನು ಕೆಳಗಿಳಿಸಲು ಅವರು ಪ್ರಯತ್ನಿಸುತ್ತಿದ್ದಾರೆ" ಎಂದು ಆಕ್ರೋಶ ಹೊರಹಾಕಿದ್ದಾರೆ. ರಾಹುಲ್ ಗಾಂಧಿ ಅವರ ವಿದೇಶಿ ಪ್ರವಾಸಗಳು ಹಾಗೂ ಅವರ ರಾಜಕೀಯ ಕಾರ್ಯಸೂಚಿಗಳ ಹಿಂದೆ ಜಾರ್ಜ್ ಸೊರೊಸ್‌ನಂತಹ ಜಾಗತಿಕ ಉದ್ಯಮಿಗಳು ಮತ್ತು ಪ್ರಭಾವಿ ವಿದೇಶಿ ಕಂಪನಿಗಳ ಹಣಕಾಸಿನ ನೆರವಿದೆ ಎಂದು ಸಂಬಿತ್ ಪಾತ್ರ ಪರೋಕ್ಷವಾಗಿ ದೂರಿದ್ದಾರೆ. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದುರ್ಬಲಗೊಳಿಸಲು ವಿದೇಶಿ 'ಮಾಸ್ಟರ್ಸ್' ನೀಡಿದ ಆಜ್ಞೆಯ ಮೇರೆಗೆ ರಾಹುಲ್ ಗಾಂಧಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಅವರು ವಿಡಿಯೋ ಸಂದೇಶದಲ್ಲಿ ತಿಳಿಸಿದ್ದಾರೆ. "ಭಾರತದ ಜನರು ಅತ್ಯಂತ ಜಾಗೃತರಾಗಿದ್ದಾರೆ. ಜನರನ್ನು ಪ್ರಚೋದಿಸಿ ದೇಶದಲ್ಲಿ ದಂಗೆ ಎಬ್ಬಿಸಲು ರಾಹುಲ್ ಗಾಂಧಿ ಅವರಿಗೆ ಸಾಧ್ಯವಿಲ್ಲ. ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ವಿಧಾನಸಭಾ ಚುನಾವಣೆಗಳ ಫಲಿತಾಂಶದಲ್ಲಿ ಜನರೇ ಇವರಿಗೆ ತಕ್ಕ ಪಾಠ ಕಲಿಸಿದ್ದಾರೆ. ಭಾರತದಲ್ಲಿ ಸಂವಿಧಾನ ಮತ್ತು ಪ್ರಜಾಪ್ರಭುತ್ವವೇ ಸರ್ವೋಚ್ಚವಾಗಿದ್ದು, ಇದು 140 ಕೋಟಿ ಭಾರತೀಯರ ಆಶೀರ್ವಾದದ ಸರ್ಕಾರವಾಗಿದೆ. ಸೊರೊಸ್ ಸೇರಿದಂತೆ ಯಾವುದೇ ವಿದೇಶಿ ಶಕ್ತಿಗಳು ಈ ದೇಶಕ್ಕೆ ಧಕ್ಕೆ ತರಲು ಸಾಧ್ಯವಿಲ್ಲ" ಎಂದು ಪಾತ್ರ ಸವಾಲು ಹಾಕಿದ್ದಾರೆ. ವಿಶ್ವದ ಹಲವು ದೇಶಗಳು ಪ್ರಸ್ತುತ ಯುದ್ಧ ಮತ್ತು ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದರೂ, ಪ್ರಧಾನಿ ನರೇಂದ್ರ ಮೋದಿ ಅವರ ಸಮರ್ಥ ನಾಯಕತ್ವದಲ್ಲಿ ಭಾರತವು ಆರ್ಥಿಕವಾಗಿ ಮುನ್ನಡೆಯುತ್ತಿದೆ.

# ಎಸ್‌ಐಆರ್ ವಿರೋಧಿಸಿ ಮೇ.30ರಂದು ರಾಯಚೂರಿನಲ್ಲಿ ಬೃಹತ್ ಪ್ರತಿರೋಧ ಸಮಾವೇಶ : ಎಂ.ಆರ್. ಭೇರಿ

ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ದೇಶದಲ್ಲಿ ಮತದಾರರ ಪರಿಷ್ಕೃತ ಪಟ್ಟಿ ಕಾರ್ಯಕ್ರಮದ ಮೂಲಕ ಸಂವಿಧಾನದ ಹಕ್ಕುಗಳಿಗೆ ಧಕ್ಕೆ ತರುವ ಹಾಗೂ ನಾಗ-ರಿಕರನ್ನು ಅನಾಥಗೊಳಿಸುವ ಕೇಂದ್ರ ಸರ್ಕಾರದ ನೀತಿಯನ್ನು ಖಂಡಿಸಿ ಮೇ 30ರಂದು ರಾಯಚೂರಿನಲ್ಲಿ ಬೃಹತ್ ಪ್ರತಿರೋಧ ಸಮಾವೇಶವನ್ನು ಆಯೋಜಿಸಲಾಗಿದೆ ಎಂದು ಬಹುಜನ ಚಿಂತಕ ಎಂ.ಆರ್. ಭೇರಿ ತಿಳಿಸಿದ್ದಾರೆ.**

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಶ್ಚಿಮ ಬಂಗಾಳ ಸೇ-ರಿದಂತೆ ಸುಮಾರು 13 ರಾಜ್ಯಗಳಲ್ಲಿ ಚುನಾವಣಾ ಆಯೋಗದ ಮೂಲಕ ವಿಶೇಷ ತೀವ್ರ ಮತದಾರರ ಪರಿಷ್ಕರಣೆ ನಡೆಸಿ ಸುಮಾರು 5 ಕೋಟಿ ಮತದಾರರ ಹಕ್ಕುಗಳನ್ನು ಕಿತ್ತುಕೊಳ್ಳಲಾಗಿದೆ ಎಂದು ಆರೋಪಿಸಿದರು. ಬಿಜೆಪಿ ಹಾಗೂ ಅದರ ಅಂಗಪಕ್ಷಗಳಿಗೆ ಅನುಕೂಲವಾಗುವ



ರೀತಿಯಲ್ಲಿ ಈ ಪ್ರಕ್ರಿಯೆ ನಡೆಯುತ್ತಿದ್ದು, ಹಿಂಬಾಗಿಲಿನಿಂದ ಅಧಿಕಾರ ಪಡೆಯುವ ಕುತಂತ್ರ ಇದಾಗಿದೆ ಎಂದು ಟೀಕಿಸಿದರು. ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರ ನೇತೃತ್ವದಲ್ಲಿ ಸಂವಿಧಾನದ ಆಶಯಗಳನ್ನು ದುರ್ಬಲಗೊಳಿಸುವ ಹಾಗೂ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಅಪಹರಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಆರೋಪಿಸಿದ ಅವರು, ದೇಶದ ಜನರಿಗೆ ಅನಗತ್ಯ 13 ದಾಖಲೆಗಳನ್ನು ಒದಗಿಸಲು ಒತ್ತಾಯಿಸಲಾಗುತ್ತಿದೆ ಎಂದರು.

ಎಸ್‌ಐಆರ್ ಪ್ರಕ್ರಿಯೆಯ ಮೂಲಕ ಮತದಾರರ ಹಕ್ಕುಗಳನ್ನು ಕಸಿದುಕೊಂಡು ಜನರನ್ನು ಎರಡನೇ ದರ್ಜೆಯ ಪ್ರಜೆಗಳನ್ನಾಗಿಸಲು ಯತ್ನಿಸಲಾಗುತ್ತಿದೆ. ದಲಿತರು, ಅಲ್ಪಸಂಖ್ಯಾತರು, ಕೃಷಿ ಕೂಲಿ ಕಾರ್ಮಿಕರು, ಶ್ರಮಿಕರು ಹಾಗೂ ಬಡವರು ಈ ಬಗ್ಗೆ ಜಾಗೃತರಾಗಬೇಕು ಎಂದು ಕರೆ ನೀಡಿದರು. ಅಸಂವಿಧಾನಿಕ, ಅವೈಜ್ಞಾನಿಕ ಹಾಗೂ ದುರುದ್ದೇಶಪೂರಿತ ಮತದಾರರ ಪಟ್ಟಿಯ ಪರಿಷ್ಕರಣಾ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲು ಹೊಸ ಹೋರಾಟ ಅನಿವಾರ್ಯವಾಗಿದೆ. ಆದ್ದರಿಂದ ಸಾಹಿತಿಗಳು, ಚಿಂತಕರು, ಕಲಾವಿದರು, ಪ್ರಗತಿಪರ ಹೋರಾಟಗಾರರು, ವಿವಿಧ ಪಕ್ಷಗಳ ಮುಖಂಡರು, ಕಾರ್ಯಕರ್ತರು ಹಾಗೂ ಎಲ್ಲಾ ಮತದಾರರು ಮೇ 30ರಂದು ರಾಯಚೂರಿನಲ್ಲಿ ನಡೆಯುವ ಬೃಹತ್ ಪ್ರತಿರೋಧ ಸಮಾವೇಶದಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ರಂಗಪ್ಪ ಗೋಸುಲ್, ವಿಶ್ವನಾಥ ಬಲ್ಲಿದವ, ಮೋಹನ ಬಲ್ಲಿದವ, ಫಿರೋಜ್ ಖಾನ್, ಇಮಾಮಸಾಬ್ ಗೌರಂಪೇಟ, ಹನುಮಂತನಾಯಕ ದೊರೆ, ಶಿವರಾಜ ರುದ್ರಾಕ್ಷಿ, ವಲಿ ಖುರೇಷಿ ಹಾಗೂ ಹನುಮಂತಪ್ಪ ಮನಾಪೂರಿ ಉಪಸ್ಥಿತರಿದ್ದರು.

ವರದಿ: ಖಾಜಾ ಹುಸೇನ್ ಬಾಬಾ ಜಾಲಹಳ್ಳಿ

# ಹೊಸೂರು ಸಿದ್ದಾಪುರ ರಸ್ತೆಯಲ್ಲೇ ಹರಿಯುತ್ತಿರುವ ಚರಂಡಿ ನೀರು: ಗ್ರಾಮ ಪಂಚಾಯತ್ ನಿರ್ಲಕ್ಷ್ಯ ಆರೋಪ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಸಮೀಪದ ಹೊಸೂರು ಸಿದ್ದಾಪುರ ಗ್ರಾಮದಲ್ಲಿ ಚರಂಡಿ ನೀರು ರಸ್ತೆ ಮೇಲೆಯೇ ಹರಿಯುತ್ತಿರುವ ಪರಿಣಾಮ ಶಾಲಾ ಮಕ್ಕಳು ಹಾಗೂ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.**

ಗ್ರಾಮದ ಮುಖ್ಯ ರಸ್ತೆಯಲ್ಲೇ ಚರಂಡಿ ನೀರು ನಿಂತುಕೊಂಡಿರುವುದರಿಂದ ದುರ್ವಾಸನೆ ಹರಡುತ್ತಿದ್ದು, ಪರಿಸರ ಗಲೀಜಾಗುತ್ತಿದೆ. ಪ್ರತಿದಿನ ಶಾಲೆಗೆ ತೆರಳುವ ಮಕ್ಕಳು ಇದೇ ರಸ್ತೆಯಲ್ಲಿ ಸಂಚರಿಸಬೇಕಾದ ಅನಿವಾರ್ಯತೆ



**"ಶಾಲಾ ಮಕ್ಕಳು ಪ್ರತಿದಿನ ಇದೇ ರಸ್ತೆಯಲ್ಲಿ ಹೋಗುತ್ತಾರೆ. ದುರ್ವಾಸನೆ ಮತ್ತು ಗಲೀಜಿನ ನಡುವೆ ಮಕ್ಕಳು ಓಡಾಡಬೇಕಾದ ಪರಿಸ್ಥಿತಿ ಬಂದಿದೆ. ತಕ್ಷಣ ಚರಂಡಿ ಸ್ವಚ್ಛಗೊಳಿಸಿ ರಸ್ತೆ ದುರಸ್ತಿ ಮಾಡಬೇಕು," ಎಂದು ಗ್ರಾಮಸ್ಥ ಜಾನಯ್ಯ ಮುರಾಳ ಒತ್ತಾಯಿಸಿದ್ದಾರೆ.**

ಎದುರಾಗಿದೆ. ಚರಂಡಿ ನೀರಿನ ಮಧ್ಯೆಯೇ ಮಕ್ಕಳು ನಡೆದು ಹೋಗಬೇಕಾಗಿರುವುದ-ರಿಂದ ಅವರ ಆರೋಗ್ಯದ ಮೇಲೂ ದುಷ್ಪ-ರಿಣಾಮ ಬೀರುವ ಆತಂಕ ವ್ಯಕ್ತವಾಗಿದೆ. ಮಳೆಯ ಸಮಯದಲ್ಲಿ ಸಮಸ್ಯೆ ಮತ್ತಷ್ಟು ಉಲ್ಬಣವಾಗುತ್ತಿದ್ದು, ರಸ್ತೆ ಸಂಪೂರ್ಣ ಕೆಸರಿನಿಂದ ತುಂಬಿಕೊಳ್ಳುತ್ತಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಚರಂಡಿ ನೀರು ಸರಿಯಾಗಿ ಹರಿದು ಹೋಗಲು ಸಮರ್ಪಕ ವ್ಯವಸ್ಥೆ ಇಲ್ಲದ ಕಾರಣ ರಸ್ತೆ ಮೇಲೆ ನೀರು ನಿಂತುಕೊಳ್ಳುತ್ತಿದ್ದು, ವಾಹನ ಸವಾರರು ಹಾಗೂ ಪಾದಚಾ-ರಿಗಳ ಸಂಚಾರಕ್ಕೂ ತೊಂದರೆ ಉಂಟಾಗಿದೆ. ಹಲವು ಬಾರಿ ಗ್ರಾಮ ಪಂಚಾಯಿತಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಗ್ರಾಮಸ್ಥರು ದೂರಿದ್ದಾರೆ.

ವರದಿ: ಖಾಜಾ ಹುಸೇನ್ ಬಾಬಾ ಜಾಲಹಳ್ಳಿ

# ಸಿ.ಪಿ.ಐ.ಎಂ.ಎಲ್. ರೆಡ್ ಸ್ಟಾರ್ ಪಕ್ಷದ 13ನೇ ತಾಲೂಕು ಮಟ್ಟದ ಸಮ್ಮೇಳನ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ ಪೋತ್ನಾಳ್ ಗ್ರಾಮದ ಶ್ರೀ ಪಂಕ್ಷನ್ ಹಾಲ್ ಸಭಾಂಗಣದಲ್ಲಿ ಸಿ.ಪಿ.ಐ.ಎಂ.ಎಲ್. ರೆಡ್ ಸ್ಟಾರ್ ಪಕ್ಷದ 13ನೇ ತಾಲೂಕು ಮಟ್ಟದ ಸಮ್ಮೇಳನವನ್ನು ಕಮ್ಯುನಿಸ್ಟ್ ಪಾರ್ಟಿಯ ರಾಜ್ಯ ಸಮಿತಿ ಸದಸ್ಯ ಎಂ.ಗಂಗಾಧರ್ ಉದ್ಘಾಟಿಸಿ ಮಾತನಾಡಿ ಕೇಂದ್ರದಲ್ಲಿನ ಬಿಜೆಪಿ ಸರಕಾರ ರಾಜ್ಯದಲ್ಲಿನ ಕಾಂಗ್ರೆಸ್ ಸರಕಾರಗಳು ದೇಶದ ಪ್ರಜಾಪ್ರಭುತ್ವದ ಮೂಲ ಮೌಲ್ಯಗಳನ್ನೇ ದುರ್ಬಲಗೊಳಿಸಿ.**

ರೈತ,ಕಾರ್ಮಿಕರ ಹಕ್ಕುಗಳನ್ನು ಕಸಿದು ,ಸಾಮಾನ್ಯ ಜನರ ಬದುಕು ಹಾಳುಮಾಡಿ, ಬಹುರಾಷ್ಟ್ರೀಯ ಕಂಪನಿಗಳಿಗೆ ಅಗತ್ಯ ಸೌಲಭ್ಯಗಳನ್ನು ನೀಡಿ ಅವುಗಳ ಲಾಭಕ್ಕಾಗಿ ಆಡಳಿತ ನಡೆಸುತ್ತಿವೆ. ದೇಶದಲ್ಲಿ ನಿರುದ್ಯೋಗ, ಬೆಲೆ ಏರಿಕೆ, ಖಾಸಗೀಕರಣ, ರೈತರ ಸಾಲಬಾಧೆ, ಕಾರ್ಮಿಕರ ಶೋಷಣೆ ನಿರಂತರವಾಗಿ ನಡೆಯುತ್ತಿದೆ. ರೈತರ ಕೃಷಿ ಭೂಮಿಯನ್ನು ಕಸಿದುಕೊಳ್ಳುವುದಕ್ಕಾಗಿಯೇ ರೈತಪರ ಹಾಗೂ ಕಾರ್ಮಿಕರ ಪರ ನೀತಿಗಳನ್ನು ಹಾಗೂ ಕಾನೂನುಗಳನ್ನು ದುರ್ಬಲಗೊಳಿಸಿ.

ಸರಕಾರಿ ಸಂಸ್ಥೆಗಳ ಖಾಸಗೀಕರಣ, ಶಿಕ್ಷಣ,ಆರೋಗ್ಯ ಕ್ಷೇತ್ರಗಳ ವ್ಯಾಪಾರೀಕರಣ ಮಾಡುವ ಮೂಲಕ ಜನವಿರೋಧಿ ಆಡಳಿತವನ್ನು ನೀಡುತ್ತಿರುವ ಸರಕಾರಗಳ ವಿರುದ್ಧ ಹೋರಾಟ ನಡೆಸುವ ಹೋರಾಟಗಾರರನ್ನು, ವಿದ್ಯಾರ್ಥಿಗಳನ್ನು, ಕಾರ್ಮಿಕ ಸಂಘಟನೆಗಳನ್ನು, ಮಹಿಳೆಯರನ್ನು,




ದಲಿತರನ್ನು, ಹಿಂದುಳಿದ ವರ್ಗಗಳವರನ್ನು ಮತ್ತು ಎಲ್ಲಾ ಶೋಷಿತ ಹಾಗೂ ಪ್ರಗತಿಪರ ಧ್ವನಿಗಳನ್ನು ಹತ್ತಿಕುವ ಕಾರ್ಯ ನಡೆಯುತ್ತಿದೆ. ದೇಶದ ಸಂಪತ್ತನ್ನು ಕೆಲವೇ ಬಂಡವಾಳಶಾಹಿಗಳ ಕೈಗೆ ಒಪ್ಪಿಸಿ, ದುಡಿಯುವ ವರ್ಗವನ್ನು ಸಂಕಷ್ಟಕ್ಕೆ ತಳ್ಳುತ್ತಿರುವ ಈ ಆಡಳಿತ ವ್ಯವಸ್ಥೆಯ ವಿರುದ್ಧ ಜನರನ್ನು ಒಗ್ಗೂಡಿಸಿ ಹೋರಾಟ ನಡೆಸಬೇಕಾಗಿದೆ ಎಂದು ಕರೆ ನೀಡಿದರು.

ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ, ಮಲ್ಲಯ್ಯ ಕಟ್ಟಿಮನಿ, ಮಾಬುಸಾಬ್ ಬೆಳ್ಳಟ್ಟಿ, ಗಿರೀಲಿಂಗಸ್ವಾಮಿ ಮಾತನಾಡಿದರು ತಾಲೂಕು ಕಾರ್ಯದರ್ಶಿ ಕಾಂ. ಯಲ್ಲಪ್ಪ ಉಟಕನೂರು ಮಾನವಿ ತಾಲೂಕು ಸಮಿತಿ ವರದಿಯನ್ನು ಮಂಡಿಸಿ, ಚರ್ಚೆ ಮಾಡಿ ಅನುಮೋದನೆ ಪಡೆದರು.

ಸಿ.ಪಿ.ಐ.ಎಂ.ಎಲ್. ರೆಡ್ ಸ್ಟಾರ್ ಪಕ್ಷದ 13ನೇ ತಾಲೂಕು ಮಟ್ಟದ ಸಮ್ಮೇಳನದಲ್ಲಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು ತಾಲೂಕಿನಲ್ಲಿ ಅರ್ಜಿ ಸಲ್ಲಿಸಿ ಸರ್ಕಾರಿ ಭೂಮಿ ಸಾಗುವಳಿ ಮಾಡಿದ ಭೂ ಹೀನ ರೈತ ದಲಿತ ದಮನಿತರ ಭೂ ಪಟ್ಟಕ್ಕಾಗಿ ಹೋರಾಡುವುದು. ತಾಲೂಕಿನಲ್ಲಿ ರಾಷ್ಟೀಯ ಉದ್ಯೋಗ ಖಾತ್ರಿ ಸಮರ್ಪಕ ಜಾ-ರಿಗಾಗಿ ಒತ್ತಾಯಿಸಿ ಹೋರಾಡುವುದು. ಯುವಕರಿಗೆ ವಿದ್ಯೆ-ಉದ್ಯೋಗಕ್ಕಾಗಿ ಸರ್ಕಾರಿ ಕೈಗಾರಿಕೆಗಳನ್ನು ಸ್ಥಾಪಿಸಲು ಹೊರಡುವುದು. ತಾಲೂಕಿನಲ್ಲಿ ಮಹಿಳೆಯರ ಮೇಲಿನ ಹತ್ಯೆ, ಅತ್ಯಾಚಾರ ದೌರ್ಜನ್ಯದ ವಿರುದ್ಧ ಹೊರಡುವುದರೊಂದಿಗೆ ಲಿಂಗ ಸಮಾನತೆಗಾಗಿ ಹೋರಾಡುವುದು.

ಆರ್ ಎಸ್ ಎಸ್ ಬಿಜೆಪಿ,ಹಿಂದುತ್ವ ಫ್ಯಾಸಿಸಂ ವಿರುದ್ಧ, ಸಂವಿಧಾನ ಉಳಿವಿಗಾಗಿ ಜಾತಿವಾದ, ಕೋಮುವಾದ, ಫ್ಯಾಸಿಸಂ ವಿರುದ್ಧ ಹೋರಾಡುವುದು. ಪ್ರಜಾಪ್ರಭುತ್ವ ವಿರೋಧಿ, ಸಂವಿಧಾನ ವಿರೋಧಿ ಎಸ್ ಐ ಆರ್ ರದ್ದುಗೊಳಿಸಲು ಹೋರಾಡುವುದು. ತಾಲೂಕಿನ ಎಲ್ಲಾ ಇಲಾಖೆಯ ಹೊರಗುತ್ತಿಗೆ ಕಾರ್ಮಿಕರನ್ನು ಖಾಯಂಗಾಗಿ ಹೊರಡುವುದು ಸೇರಿದಂತೆ ಇತರ ನಿರ್ಣಯಗಳನ್ನು ಅಂಗಿಕರಿಸಲಾಯಿತು. ನೂತನ ಮಾನವಿ ತಾಲೂಕು ಸಮಿತಿಗೆ 11 ಜನರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ತಾಲೂಕು ಕಾರ್ಯದರ್ಶಿಯಾಗಿ ಯಲ್ಲಪ್ಪ ಉಟಕನೂರು ಸೇರಿದಂತೆ ರಾಮಕೃಷ್ಣ, ಮಲ್ಲನಗೌಡ, ರವಿ ಜಿನೂರು, ಪ್ರಕಾಶ್ ತಡಕಲ್, ಪ್ರಕಾಶ್ ದೋತರಬಂಡಿ, ದೇವರಾಜ್ ಪೋತ್ನಾಳ್, ಗುಂಡಪ್ಪ ಮುದ್ದನಗುಡ್ಡಿ, ಕ-ರಿಬೀರಯ್ಯ ತಾತ, ಈರಣ್ಣ ಕುರ್ಡಿ, ಶಿವರಾಜ್ ಪೋತ್ನಾಳ್ ಇವರನ್ನು ಚುನಾಯಿಸಲಾಯಿತು. 16 ಜನರನ್ನು ಜಿಲ್ಲಾ ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಆಯ್ಕೆಗೊಂಡರು. ಸಿ.ಪಿ.ಐ.ಎಂ.ಎಲ್. ರೆಡ್ ಸ್ಟಾರ್ ಪಕ್ಷದ ಧ್ವಜಾರೋಹಣದೊಂದಿಗೆ ಹೋರಾಡಿ ಮಡಿದ ಹುತಾತ್ಮರಿಗೆ ಮೌನಾಚರಣೆ, ಸ್ಮರಣೆ ಮಾಡಲಾಯಿತು. ಸಮ್ಮೇಳನ ಅಂತಾರಾಷ್ಟ್ರೀಯ ಗೀತೆಯೊಂದಿಗೆ ಧ್ವಜ ಅವರೋಹಣ ಮಾಡುವುದರ ಮೂಲಕ ಸಮ್ಮೇಳನ ಮುಕ್ತಾಯವಾಯಿತು. ಮಾನವಿ ತಾಲೂಕಿನ ಪಕ್ಷದ ನೂರಾರು ಸದಸ್ಯರು ಸಮ್ಮೇಳನದಲ್ಲಿ ಭಾಗವಹಿಸಿದರು.

# ಎಲ್ಲಾ ಹಬ್ಬಗಳನ್ನು ಶಾಂತಿ, ಸೌಹಾರ್ದತೆಯಿಂದ ಆಚರಿಸಬೇಕು

## ಶಾಂತಿ ಕದಡಲು ಯತ್ನಿಸುವ ಕಿಡಿಗೇಡಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ : ಡಿ ವೈ ಎಸ್ ಪಿ ಪ್ರಕಾಶ್ ರಾಥೋಡ್

ನೈಜ್ಯ ದೆಸೆ ನ್ಯೂಸ್

**ಭದ್ರಾವತಿ: ಎಲ್ಲಾ ಹಬ್ಬಗಳನ್ನು ಶಾಂತಿ ಮತ್ತು ಸೌಹಾರ್ದತೆಯಿಂದ ಆಚರಿಸಬೇಕು. ಶಾಂತಿ ಕದಡಲು ಯತ್ನಿಸುವ ಯಾವುದೇ ಕಿಡಿಗೇಡಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಭದ್ರಾವತಿ ಉಪ ವಿಭಾಗದ ಡಿ ವೈ ಎಸ್ ಪಿ ಪ್ರಕಾಶ್ ರಾಥೋಡ್ ತಿಳಿಸಿದರು.**

ಮೇ. 28ರಂದು ನಡೆಯಲಿರುವ ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಮಹಾತ್ಮ ಗಾಂಧಿ ರಸ್ತೆ (ತರೀಕೆರೆ ರಸ್ತೆ)ಯ ನಗರದ ಪಾಂಡುರಂಗ ಕಲ್ಯಾಣ ಮಂಟಪದಲ್ಲಿ ಭಾನುವಾರ ವಿವಿಧ ಧರ್ಮಗಳ ಮುಖಂಡರೊಂದಿಗೆ ನಡೆದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರಮುಖ ಸೂಚನೆಗಳನ್ನು ನೀಡಿ ಹಬ್ಬದ ಸಂದರ್ಭದಲ್ಲಿ ಸಂಚಾರ ಸಮಸ್ಯೆಯಾಗದಂತೆ ಗಮನ ಹರಿಸಲಾಗುವುದು ಎಂದರು. ತ್ಯಾಗ, ಪ್ರೀತಿ, ಬಲಿದಾನದ ಸಂಕೇತವಾಗಿರುವ ಬಕ್ರೀದ್ ಹಬ್ಬವನ್ನು ಶಾಂತಿಯಿಂದ ಆಚರಿಸೋಣ. ಎಲ್ಲ ಧರ್ಮಗಳ ಮೂಲ ಒಂದೇ, ಆದ-ರೆ ಆಚರಣೆ ಮಾತ್ರ ಬೇರೆಯಾಗಿರುತ್ತದೆ.




ಎಲ್ಲಾ ಧರ್ಮಗಳ ಸಾರವೂ ಮುಕ್ತಿಯನ್ನು ಪಡೆಯುವುದೇ ಆಗಿದೆ. ದ್ವೇಷಕ್ಕಿಂತ ಮಾನವೀಯ ಮೌಲ್ಯ ದೊಡ್ಡದು. ನಾವು ಭಾರತೀಯರು. ವೈವಿಧ್ಯತೆಯಲ್ಲಿ ಏಕತೆ ಕಾಣುವವರು. ನಾವು ಎಲ್ಲರನ್ನೂ ಸಮಾನವಾಗಿ ಕಾಣುತ್ತೇವೆ. "ಹಬ್ಬದ ಸಂದರ್ಭ ಶಾಂತಿ ಸುವ್ಯವಸ್ಥೆ ಕಾಪಾಡುವುದು ಎಲ್ಲರ ಜವಾಬ್ದಾರಿ. ಸೌಹಾರ್ದಯುತವಾಗಿ ಹಬ್ಬ ಆಚರಿಸಬೇಕು. ಹಬ್ಬದ ಸಮಯ ಯಾವುದೇ ರೀತಿಯ ಕಾನೂನು ಬಾಹಿರ ಚಟುವಟಿಕೆಗಳಿಗೆ ಆಸ್ಪದ ನೀಡಬಾರದು. ಯಾವುದೇ ಸಮಸ್ಯೆ ಎದುರಾದರೂ ಕೂಡಲೇ ಪೊಲೀಸ-ರಿಗೆ ಮಾಹಿತಿ ನೀಡಬೇಕೇ ಹೊರತು, ಕಾನೂನು ಕೈಗೆತ್ತಿಕೊಳ್ಳಬಾರದು ಎಂದು ಡಿ ವೈ ಎಸ್ ಪಿ ಪ್ರಕಾಶ್ ರಾಥೋಡ್ ಎಚ್ಚರಿಕೆಯ ಸಂದೇಶ ನೀಡಿದರು. ಅಂಜುಮನ್ ಸಮಿತಿ ಅಧ್ಯಕ್ಷ ಅಯೂಬ್ ಖಾನ್ ಮಾತನಾಡಿ, " ಕರ್ನಾಟಕ ರಾಜ್ಯ ಒಂದು ಮುತ್ತು ಇದ್ದಂತೆ. ಇದು ಸರ್ವ ಧರ್ಮೀಯ-ರಿಗೆ ಆಶ್ರಯ ನೀಡಿದ ರಾಜ್ಯ." ಯಾವುದೇ ಧರ್ಮಕ್ಕೆ ನೋವು ಉಂಟು ಮಾಡದೆ ಸರ್ವರ ಒಳಿತಿಗಾಗಿ ಪ್ರಾರ್ಥಿಸುವುದೇ ಬಕ್ರೀದ್ ಹಬ್ಬದ ಉದ್ದೇಶ" ಎಂದು ತಿಳಿಸಿದರು.

ವಿಶ್ವ ಹಿಂದೂ ಪರಿಷತ್ ಭಜರಂಗದಳ ಪ್ರಮುಖ ವಡಿವೇಲು ಮಾತನಾಡಿ, ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಕುರಿ, ಕೋಳಿ ಬಲಿ ಕೊಡಿ. ಆದರೆ, ಹಿಂದೂಗಳು ನಿತ್ಯಪೂಜಿಸುವ ಗೋ ಮಾತೆಯನ್ನು ಮಾತ್ರ ಬಲಿ ಕೊಡಬೇಡಿ. ಈ ಹಿಂದೆ ಗೋ ಹತ್ಯೆ ಘಟನೆಗಳು ನಡೆದಿರುವ ಬಗ್ಗೆ ಪೊಲೀಸ್ ಇಲಾಖೆ ಗಮನಕ್ಕೂ ತರಲಾಗಿದೆ ಎಂದರು. ನಗರಸಭೆ ಉಪಾಧ್ಯಕ್ಷ ಬಷೀರ್ ಅಹಮದ್ ಮಾತನಾಡಿ, ಬಕ್ರೀದ್ ಹಬ್ಬದ ದಿನ ಪರಿಸರಕ್ಕೆ ಹಾನಿಯಾಗದಂತೆ ಸ್ವಚ್ಛತೆ ಕಾಪಾಡುವ ಜವಾಬ್ದಾರಿಯನ್ನು ತಾವು ತೆಗೆದುಕೊಳ್ಳುವುದಾಗಿ ತಿಳಿಸಿ, ಗೋ ಹತ್ಯೆ ಮಾಡಿದವರಿಗೆ ಶಿಕ್ಷೆ ವಿಧಿಸುವಂತೆ ತಾವೂ ಸಹ ಆಗ್ರಹಿಸುತ್ತೇವೆ. ಪದೇ ಪದೇ ಒಂದು ಸಮುದಾಯವನ್ನು ಗು-ರಿಯಾಗಿಸುವುದು ಸಲ್ಲದು ಎಂದರು.

ಮುಖಂಡರಾದ ಪೊಲೀಸ್ ಅಮೀರ್ ಜಾನ್ ಮಾತನಾಡಿ, ಈಗಾಗಲೇ ನಮ್ಮ ಧರ್ಮಗುರುಗಳು ಈಗಾಗಲೇ ರಾಷ್ಟ್ರ ಮಟ್ಟದಲ್ಲಿ ನಿರ್ಣಯ ಕೈಗೊಂಡಿದ್ದು ಗೋವನ್ನು "ರಾಷ್ಟ್ರೀಯ ಪ್ರಾಣಿ" ಎಂದು ಘೋಷಿಸುವಂತೆ ಒತ್ತಾಯಿಸುವುದಾಗಿ ತಿಳಿಸಿದ್ದು, ಎಲ್ಲ ಮಸೀದಿಗಳಲ್ಲೂ ಈಗಾಗಲೇ ಸಂದೇಶ ರವಾನಿಸಲಾಗಿದೆ ಎಂದರು. ಈ ಸಂದರ್ಭದಲ್ಲಿ ನಾಮನಿರ್ದೇಶಿತ ನಗರಸಭಾ ಸದಸ್ಯ ದಿಲ್ದಾರ್, ಮುಸ್ಲಿಂ ಮುಖಂಡರಾದ ಪೀರ್ ಷರೀಫ್, ಹಿಂದೂ ಸಂಘಟನೆ ಮುಖಂಡ ಮಂಜುನಾಥರಾವ್(ಪೋಕಸ್), ಬಿಜೆಪಿ ಪ್ರಧಾನ ಕಾರ್ಯದರ್ಶಿ ಚನ್ನೇಶ್ ಸೇ-ರಿದಂತೆ ಸರ್ವಧರ್ಮಗಳ ಮುಖಂಡರು ಶಾಂತಿ ಸಭೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ ವ್ಯಕ್ತಪಡಿಸಿ, ಭದ್ರಾವತಿಯಲ್ಲಿ ಶಾಂತಿ ಸೌಹಾರ್ದತೆಯಿಂದ ಹಬ್ಬಗಳನ್ನು ಆಚರಿಸಲು ತೀರ್ಮಾನಿಸುವ ಮೂಲಕ ಸಭೆ ಮುಕ್ತಾಯವಾಯಿತು. ನಗರ ವೃತ್ತ ನಿರೀಕ್ಷಕರಾದ ನಾಗಮ್ಮ, ಗ್ರಾಮಾಂತರ ವೃತ್ತ ನಿರೀಕ್ಷಕ ಚಿದಾನಂದ್, ಹೊಳೆಹೊನ್ನೂರು ವೃತ್ತ ನಿರೀಕ್ಷಕ ಶಿವಪ್ರಸಾದ್, ಹಳೇನಗರ ಠಾಣೆಯ ಪಿ ಎಸ್ ಐ ಸುನೀಲ್ ಕುಮಾರ್ ತೇಲಿ, ಹೊಸಮನೆ ಠಾಣೆಯ ಪಿ ಎಸ್ ಐ ಸಿದ್ದಪ್ಪ, ನ್ಯೂಟೌನ್ ಠಾಣೆಯ ಪಿ ಎಸ್ ಐ ರಮೇಶ್ ಮತ್ತು ಪಿ ಎಸ್ ಐ ಕವಿತಾ, ಗ್ರಾಮಾಂತರ ಠಾಣೆಯ ಪಿ ಎಸ್ ಐ ಶಿಲ್ಪಾ ನಾಯಿಗೇರ ಮತ್ತು ಪಿ ಎಸ್ ಐ ಮಹೇಶ್ ಸಭೆಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವರದಿ: ಕೆ ಆರ್ ಶಂಕರ್

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINT-ERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.